ಕರ್ನಾಟಕ ವಿಧಾನ ಸಭೆ

ಸೋಮವಾರ 8ನೇ ಜುಲೈ 2002ರಂದು

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 11-00 ಗಂಟೆ 10 ನಿಮಿಷಕ್ಕೆ

ಸಮಾವೇಶಗೊಂಡಿತು.

ಅಧ್ಯಕ್ಷರು: (ಶ್ರೀ ಎಂ.ವಿ. ವೆಂಕಟಪ್ಪ) ರವರು,

ಪೀಠವನ್ನು ಅಲಂಕರಿಸಿದ್ದರು.

ಸಂತಾಪ ಸೂಚನೆಗಳು

ಅಧ್ಯಕ್ಷರು.- ಇಂದಿನ ಕಾರ್ಯಕ್ರಮದ ಪಟ್ಟಿಯ ಪ್ರಕಾರ ಮೊದಲು ಸಂತಾಪ ಸೂಚನೆಗಳನ್ನು ತೆಗೆದುಕೊಳ್ಳೋಣ.

ಸಭಾಧ್ಯಕ್ಷರು :

ಭಾರತದ ಮಾಜಿ ಉಪ ರಾಷ್ಟ್ರಪತಿ, ಹಿರಿಯ ರಾಜಕೀಯ ಮುತ್ಸದ್ದಿ ಹಾಗೂ ನಮ್ಮ ರಾಜ್ಯದ ಮಾಜಿ ಮುಖ್ಯಮಂತ್ರಿಯವರಾದ ಶ್ರೀ ಬಸಪ್ಪ ದಾನಪ್ಪ ಜತ್ತಿ, ಮಾಜಿ ಶಾಸಕರಾದ ಶ್ರೀ ದತ್ತಾತ್ರೇಯ ವೈಂಗಣಕರ್, ಶ್ರೀ ಎಸ್. ಸೂರ್ಯನಾರಾಯಣರಾವ್, ಪ್ರಜಾ ಪ್ರತಿನಿಧಿ ಸಭಾ ಸದಸ್ಯರಾಗಿದ್ದ ಶ್ರೀ ಬಿ. ಪುಟ್ಟಣ್ಣ ಹಾಗೂ ಮಾಜಿ ಲೋಕಸಭೆಯ ಸೆಕ್ರೆಟರಿ ಜನರಲ್ ಹಾಗೂ ಮಾಜಿ ಮುಖ್ಯ ಚುನಾವಣಾಧಿಕಾರಿ ಶ್ರೀ ಎಸ್.ಎಲ್. ಶಕ್ಧರ್ ಅವರುಗಳು ನಿಧನರಾಗಿರುವುದನ್ನು ಈ ಸದನಕ್ಕೆ ಅತ್ಯಂತ ವಿಷಾದದಿಂದ ತಿಳಿಸುತ್ತೇನೆ.

1. ಶ್ರೀ ಬಸಪ್ಪ ದಾನಪ್ಪ ಜತ್ತಿ (ಬಿ.ಡಿ. ಜತ್ತಿ)

ಭಾರತದ ಮಾಜಿ ಉಪ ರಾಷ್ಟ್ರಪತಿ, ಹಿರಿಯ ರಾಜಕೀಯ ಮುತ್ಸದ್ದಿ ಹಾಗೂ ಮಾಜಿ ಮುಖ್ಯಮಂತ್ರಿಯವರಾದ ಶ್ರೀ ಬಸಪ್ಪ ದಾನಪ್ಪ ಜತ್ತಿ ಅವರು ಬಾಗಲಕೋಟೆ ಜಿಲ್ಲೆ ಜಮಖಂಡಿ ತಾಲ್ಲೂಕಿನ ಸಾವಳಗಿ ಗ್ರಾಮದಲ್ಲಿ 1912 ರ ಸೆಪ್ಟೆಂಬರ್ 10 ರಂದು ಅತ್ಯಂತ ಬಡ ಕುಟುಂಬದಲ್ಲಿ ಜನಿಸಿದವರಾದರೂ ದೇಶದ ಅತ್ಯುನ್ನತ ಹುದ್ದೆಯಾದ ರಾಷ್ಟ್ರಪತಿ (ಹಂಗಾಮಿ) ಸ್ಥಾನವನ್ನು ತಲುಪಿದ ಏಕೈಕ ಕನ್ನಡಿಗರು. ವೃತ್ತಿಯಲ್ಲಿ ವಕೀಲರಾಗಿದ್ದ ಶ್ರೀಯುತರು 1943 ರಲ್ಲಿಯೇ ಜಮಖಂಡಿ ಪುರಸಭೆಯ ಸದಸ್ಯರಾಗಿ ರಾಜಕೀಯ ಕ್ಷೇತ್ರಕ್ಕೆ ಪಾದಾರ್ಪಣೆ ಮಾಡಿದ್ದು, ಒಂದು ಅವಧಿಗೆ ಆ ಪುರಸಭೆಯ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದಾರೆ. ತದನಂತರ ಜಮಖಂಡಿ ಕ್ಷೇತ್ರದಿಂದ ರಾಜ್ಯ ವಿಧಾನ ಸಭೆಯ ಶಾಸಕರಾಗಿ ಚುನಾಯಿತರಾಗಿ ಅಲ್ಲಿನ ಪ್ರಜಾ ಪರಿಷತ್ ಕಾರ್ಯದರ್ಶಿಯಾಗಿ, ರಾಜ್ಯದ ಮಂತ್ರಿಯಾಗಿ, ಮುಖ್ಯಮಂತ್ರಿಯಾಗಿ ಸೇವೆ ಸಲ್ಲಿಸಿರುತ್ತಾರೆ.

ಗಾಂಧೀಜಿಯವರ ತತ್ವ ಸಿದ್ಧಾಂತದಿಂದ ಆಕರ್ಷಿತರಾಗಿದ್ದ ಶ್ರೀ ಬಿ.ಡಿ. ಜತ್ತಿಯವರು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಪಾಲ್ಗೊಂಡಿದ್ದರು. ಶ್ರೀಯುತರು 1949 ರಲ್ಲಿ ಮುಂಬಯಿ ರಾಜ್ಯ

ವಿಧಾನ ಸಭೆಗೆ ಶಾಸಕರಾಗಿ ನಾಮಕರಣ ಹೊಂದಿ, ಮುಂಬಯಿ ವಿಧಾನಸಭೆಯ ಸಂಸದೀಯ ಕಾರ್ಯದರ್ಶಿಯಾಗಿದ್ದರು. 1952 ರಲ್ಲಿ ಪ್ರಥಮ ಸಾರ್ವತ್ರಿಕ ಚುನಾವಣೆಯಲ್ಲಿ ಜಮಖಂಡಿ ಕ್ಷೇತ್ರದಿಂದ ಕಾಂಗ್ರೆಸ್ ಪಕ್ಷದಿಂದ ಆಯ್ಕೆಯಾದ ಶ್ರೀಯತರು 1952 ರಿಂದ 1956 ರವರೆಗೆ ಮುಂಬೈ ಸರಕಾರದಲ್ಲಿ ಆರೋಗ್ಯ ಮತ್ತು ಕಾರ್ಮಿಕ ಉಪ ಮಂತ್ರಿಯಾಗಿದ್ದರು. 1957 ರಲ್ಲಿ ಭೂ ಸುಧಾರಣಾ ಮಂಡಳಿಯ ಅಧ್ಯಕ್ಷರಾಗಿ ಕರಡು ಶಾಸನವನ್ನು ಸಿದ್ಧಪಡಿಸಿದ ಕೀರ್ತಿ ದಾಖಲಾರ್ಹವಾದುದಾಗಿದೆ. ನಂತರ 1957 ರಿಂದ 1962 ರ ಅವಧಿಯಲ್ಲಿ ಪುನರಾಯ್ಕೆಯಾಗಿ, 1958 ರಿಂದ 1962 ರವರೆಗೆ ಏಕೀಕೃತ ಮೈಸೂರು ರಾಜ್ಯದ ಮುಖ್ಯಮಂತ್ರಿಯಾಗಿದ್ದರು. 1962 ರಲ್ಲಿ ಜಮಖಂಡಿ ಕ್ಷೇತ್ರದಿಂದ 3 ನೇ ಮೈಸೂರು ವಿಧಾನ ಸಭೆಯಲ್ಲಿ ಚುನಾಯಿತರಾಗಿ ಹಣಕಾಸು ಸಚಿವರಾಗಿ, 1962 ರಿಂದ 1968 ರ 4 ನೇ ವಿಧಾನಸಭೆಗೆ ಆಯ್ಕೆಯಾಗಿ ಆಹಾರ ಸಚಿವರಾಗಿ ಕಾರ್ಯ ನಿರ್ವಹಿಸಿದ್ದರು. 1968 ರಿಂದ 1972 ರವರೆಗೆ ಪುದಚೇರಿಯ ಲೆಫ್ಟಿನೆಂಟ್ ಗವರ್ನರ್ ಆಗಿ, 1972 ರಲ್ಲಿ ಓರಿಸ್ಸಾ ರಾಜ್ಯಪಾಲರಾಗಿ, 1974 ರಿಂದ 1979 ರವರೆಗೆ ರಾಜ್ಯಸಭೆ ಸದಸ್ಯತ್ವದ ಅವಧಿಯಲ್ಲಿ ಭಾರತದ ಉಪ ರಾಷ್ಟ್ರಪತಿಯಾಗಿ, 1977 ರಲ್ಲಿ ಕೆಲಕಾಲ ಹಂಗಾಮಿ ರಾಷ್ಟ್ರಪತಿಯಾಗಿ, ಸೇವೆ ಸಲ್ಲಿಸಿದ ಶ್ರೀಯುತರು ಅವಿರತವಾಗಿ ಬೇರೆ ಬೇರೆ ಹುದ್ದೆಗಳಲ್ಲಿ ದೇಶಕ್ಕೆ ಸಲ್ಲಿಸಿದ ಸೇವೆ ಅತ್ಯಂತ ಸ್ಮರಣಾರ್ಹವಾದುದು. ಅಲ್ಲದೇ, ಬೆಂಗಳೂರಿನ ಬಸವ ಭವನವನ್ನು ಕಟ್ಟಿ ಬೆಳಸಿದ ಕೀರ್ತಿಯು ಶ್ರೀ ಜತ್ತಿಯವರದು. ಶ್ರೀಯುತರು ಅಂತ್ಯ ಕಾಲದವರೆಗೂ ಬಸವ ಸಮಿತಿಯ ಕಾರ್ಯಾಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದ್ದರು.

ಶ್ರೀಯುತರು ದಿನಾಂಕ 7-6-2002 ರಂದು ನಿಧನ ಹೊಂದಿದರು.

2. ಶ್ರೀ ದತ್ತಾತ್ರೇಯ ವೈಂಗಣಕರ್

ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ದತ್ತಾತ್ರೇಯ ವೈಂಗಣಕರ್ ಅವರು 21 ನೇ ನವೆಂಬರ್ 1927 ರಲ್ಲಿ ಬನವಾಸಿಯಲ್ಲಿ ಜನಿಸಿ, ವೃತ್ತಿಯಲ್ಲಿ ವಕೀಲರಾಗಿದ್ದರು. ಕಾರವಾರದ ಕೋಡಿಭಾಗದ ವಿವೇಕಾನಂದ ಪ್ರೌಢ ಶಾಲೆಯ ಸಂಸ್ಥಾಪಕರಾಗಿ, ಕಾರವಾರದ ಅರ್ಬನ್ ಕೋ ಆಪರೇಟಿವ್ ಬ್ಯಾಂಕಿನ ನಿರ್ದೇಶಕರಾಗಿ, ದರಯ್ಯಾವಾರ್ಡಿ ಮಜದೂರ್ ಸಂಘದ ಅಧ್ಯಕ್ಷರಾಗಿ, ಬ್ಲಾಕ್ ಕಾಂಗ್ರೆಸ್ (ಐ) ಸಮಿತಿಯ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ ಶ್ರೀಯುತರು ಆರನೇ ವಿಧಾನ ಸಭೆಗೆ ಕಾರವಾರ ಕ್ಷೇತ್ರದಿಂದ ಚುನಾಯಿತರಾಗಿ ಸಾಮಾಜಿಕ ಕ್ಷೇತ್ರದಲ್ಲಿ ಅಗಾಧ ಸೇವೆ ಸಲ್ಲಿಸಿದ್ದರು.

ಶ್ರೀಯುತರು ದಿನಾಂಕ 4-6-2002 ರಂದು ನಿಧನ ಹೊಂದಿದರು.

3. ಶ್ರೀ ಬಿ. ಪುಟ್ಟಣ್ಣ

ಕೋಲಾರ ಜಿಲ್ಲೆಯ ಮುಳಬಾಗಿಲು ತಾಲ್ಲೂಕು ಕ್ಷೇತ್ರದಿಂದ ಮೈಸೂರು ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾದ ಶ್ರೀ ಬಿ. ಪುಟ್ಟಣ್ಣ ಅವರು 1945 ರಿಂದ 1949 ರವರೆಗೆ ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ.

ಶ್ರೀಯುತರು ದಿನಾಂಕ 30-4-2002 ರಂದು ನಿಧನ ಹೊಂದಿದರು.

4. ಶ್ರೀ ಎಸ್. ಸೂರ್ಯನಾರಾಯಣರಾವ್

ವಿಧಾನಸಭೆಯ ಮಾಜಿ ಸದಸ್ಯರಾದ ಶ್ರೀ ಎಸ್. ಸೂರ್ಯನಾರಾಯಣರಾವ್ ಅವರು 24ನೇ ಆಗಸ್ಟ್, 1924 ರಂದು ಹಾಸನ ಜಿಲ್ಲೆಯ ಅರಕಲಗೂಡಿನಲ್ಲಿ ಜನಿಸಿ, ಹಿರಿಯ ಸ್ವಾತಂತ್ರ್ಯ ಹೋರಾಟಗಾರರಾಗಿ, ಕಾರ್ಮಿಕ ಮುಖಂಡರಾಗಿ, ಭಾರತ ಕಮ್ಯೂನಿಸ್ಟ್ ಪಕ್ಷದ (ಮಾರ್ಕ್ಸ್‌ವಾದಿ) ರಾಜ್ಯ ಕಾರ್ಯದರ್ಶಿಯಾಗಿ "ಕಾಮ್ರೆಡ್ ಸೂರಿ" ಎಂದೇ ಮನ್ನಣೆ ಗಳಿಸಿದ್ದರು. ಪ್ರಸ್ತುತ ಸಿಐಟಿಯ ರಾಜ್ಯ ಘಟಕದ ಅಧ್ಯಕ್ಷರಾಗಿ, ಅಖಿಲ ಭಾರತ ಘಟಕದ ಉಪಾಧ್ಯಕ್ಷರಾಗಿ ಮತ್ತು ಪಕ್ಷದ ಕೇಂದ್ರ ಸಮಿತಿ ಸದಸ್ಯರಾಗಿ ಸೇವೆ ಸಲ್ಲಿಸಿದ ಶ್ರೀಯುತರು 1942 ರಲ್ಲಿ ನಡೆದ ಕ್ವಿಟ್ ಇಂಡಿಯಾ ಚಳವಳಿಯಲ್ಲಿ ಭಾಗವಹಿಸಿದ್ದರು ಹಾಗೂ 7 ನೇ ವಿಧಾನ ಸಭೆಗೆ (1983-1984) ವರ್ತೂರು ವಿಧಾನ ಸಭಾ ಕ್ಷೇತ್ರದಿಂದ ಆಯ್ಕೆಯಾಗಿ ಸೇವೆ ಸಲ್ಲಿಸಿದ್ದರು.

ಶ್ರೀಯುತರು ದಿನಾಂಕ 1-7-2002 ರಂದು ನಿಧನ ಹೊಂದಿದರು.

5. ಶ್ರೀ ಎಸ್. ಎಲ್. ಶಕ್ಧರ್

ಸಂಸದೀಯ ವ್ಯವಹಾರಗಳ ಸಚಿವಾಲಯದ ಪ್ರಥಮ ಕಾರ್ಯದರ್ಶಿಯಾಗಿದ್ದ ಶ್ರೀ ಎಸ್.ಎಲ್. ಶಕ್ಧರ್, ಸಂಸತ್ತಿನ ನಡವಳಿಕೆ ಮತ್ತು ನಿಯಮಾವಳಿಗಳನ್ನು ಕುರಿತು ಎಂ.ಎಲ್. ಕೌಲ್ ಅವರ ಜತೆಗೂಡಿ ಬರೆದಿರುವ ಗ್ರಂಥವು ಸದನದ ಕಲಾಪದ ನಿಯಮಗಳನ್ನು ಉಲ್ಲೇಖಿಸಲು ಆಧಾರಯುಕ್ತವಾದುದು. ಶ್ರೀಯುತರು ಮುಖ್ಯ ಚುನಾವಣಾಧಿಕಾರಿಯಾಗಿ ಹಾಗೂ ಲೋಕಸಭೆಯ ಸೆಕ್ರೆಟರಿ ಜನರಲ್ ಆಗಿ ಕಾರ್ಯ ನಿರ್ವಹಿಸಿದ್ದರು.

ಶ್ರೀಯುತರು ದಿನಾಂಕ 18-5-2002 ರಂದು ನಿಧನ ಹೊಂದಿದರು.

+ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು).- ಮಾನ್ಯ ಅಧ್ಯಕ್ಷರೇ, ನಲವತ್ತು ವರ್ಷಗಳ ಹಿಂದೆ ನಾನು ವಿಧಾನ ಸಭೆಯನ್ನು ಪ್ರವೇಶಿಸಿದ ಕಾಲದಲ್ಲಿ ಶ್ರೀ ಬಿ.ಡಿ. ಜತ್ತಿಯವರು ನಮ್ಮ ರಾಜ್ಯದ ಮುಖ್ಯಮಂತ್ರಿಗಳಾಗಿದ್ದರು. ಸುಮಾರು ನಲವತ್ತು ವರ್ಷಗಳ ಕಾಲ ನಮ್ಮ ಸ್ನೇಹ ಅತ್ಯಂತ ಪ್ರೀತಿಪೂರ್ವಕವಾಗಿತ್ತು. ಅವರು ಈ ರಾಜ್ಯದ ಮುಖ್ಯಮಂತ್ರಿಯಾದ ತರುವಾಯದಲ್ಲಿ ತಮ್ಮ ಅಧಿಕಾರಾವಧಿಯನ್ನು ಆರು ತಿಂಗಳಲ್ಲಿ ಮುಗಿಸುತ್ತಾರೋ? ಎಂಟು ತಿಂಗಳಲ್ಲಿ ಮುಗಿಸುತ್ತಾರೋ?. ಇಲ್ಲವೇ, ಅಬ್ಬಬ್ಬಾ ಎಂದರೆ ಒಂದು ವರ್ಷದಲ್ಲಿ ಮುಗಿಸಬಹುದು ಎಂದು ಬಹಳಷ್ಟು ಜನರು ಅನುಮಾನಪಟ್ಟರು. ಆದರೆ ಅವರು ತಮ್ಮ ಅಧಿಕಾರಾವಧಿಯನ್ನು ಐದು ವರ್ಷಗಳ ಕಾಲ ಮುಗಿಸಿದರು. ಅತ್ಯಂತ ಪ್ರಗತಿಪರ ಚಿಂತನೆಗಳನ್ನು ಮಾನ್ಯ ಜತ್ತಿಯವರು ತಮ್ಮದನ್ನಾಗಿ ಆರಿಸಿಕೊಂಡಿದ್ದರು. ತಾವು ಹೇಳಿದ ಹಾಗೆ ಮುಂಬಯಿ ಪ್ರೆಸಿಡೆನ್ಸಿಯಲ್ಲಿ ಇದ್ದಾಗಲೇ ಭೂಸುಧಾರಣಾ ವಿಧೇಯಕಕ್ಕೆ ಅವರು ತಮ್ಮದೇ ಆದಂತಹ ವಿಶೇಷವಾದಂತಹ ಕೊಡುಗೆಯನ್ನು ಕೊಟ್ಟರು. ಜೊತೆಗೆ ನಮ್ಮ ರಾಜ್ಯದ ಭೂ ಸುಧಾರಣಾ ಕಾಯ್ದೆಯಲ್ಲೂ ಕೂಡ ಶ್ರೀ ಜತ್ತಿಯವರ ಪಾತ್ರ ಬಹಳವಾಗಿತ್ತೆಂಬುದನ್ನು ನಾವು ಅಭಿಮಾನದಿಂದ ನೆನೆಸಿಕೊಳ್ಳಬೇಕಾಗಿದೆ. ಸರಳ, ಸುಸಂಸ್ಕೃತ ಸೌಜನ್ಯಕ್ಕೆ ಅವರಲ್ಲಿ ಎಂದಿಗೂ ಕೊರತೆಯಿರಲಿಲ್ಲ, ತಾವು ವಹಿಸಿಕೊಂಡಂಥ ಎಲ್ಲಾ ರೀತಿಯ ಜವಾಬ್ದಾರಿಗಳನ್ನು ಅತ್ಯಂತ ಸಮರ್ಥವಾಗಿ ನಿರ್ವಹಿಸುವ ಶಕ್ತಿಯನ್ನು ಅವರು ತೋರಿಸಿ ಕೊಟ್ಟರು. ಮುಖ್ಯಮಂತ್ರಿಯಾಗಿ ಅರ್ಥ ಮಂತ್ರಿಯಾಗಿ, ರಾಜ್ಯಪಾಲರಾಗಿ, ಉಪ

ರಾಷ್ಟ್ರಪತಿಗಳಾಗಿ ಮತ್ತು ಅತ್ಯಂತ ಕೋಲಹಲಕಾರಿ ದಿನಗಳಲ್ಲಿ ಹಂಗಾಮಿ ರಾಷ್ಟ್ರಪತಿಗಳಾಗಿ ಕಾರ್ಯನಿರ್ವಹಿಸುವ ಕಾಲದಲ್ಲಿ ತಮ್ಮ ಚಾರಿತ್ರ್ಯದ ಶ್ರೀಮಂತಿಕೆಯನ್ನು ಅವರು ಎತ್ತಿ ತೋರಿಸಿ ಕೊಟ್ಟರು. ಅವರು ರಾಷ್ಟ್ರಪತಿಯಾಗಿದ್ದಂಥ ಕಾಲದಲ್ಲಿ ಒಂಭತ್ತು ವಿಧಾನ ಸಭೆಗಳನ್ನು ವಿಸರ್ಜನೆ ಮಾಡಬೇಕೆನ್ನುವಂಥ ಗೊತ್ತುವಳಿಯನ್ನು ಕೇಂದ್ರ ಸರ್ಕಾರ ಅವರ ಅವಗಾಹನೆಗೆ ಮತ್ತು ಅವರ ಮಂಜೂರಾತಿಗೆ ಕಳುಹಿಸಿಕೊಟ್ಟಾಗ ಅವರು ಸಾಕಾದಷ್ಟು ಮಾನಸಿಕ ಒತ್ತಡದ ಸುಳಿಗೆ ಮಾನ್ಯ ಜತ್ತಿಯವರು ಸಿಕ್ಕಿದ್ದರೆಂಬುದು ಗುಟಾಗಿ ಉಳಿಯಲಿಲ್ಲ. ಅದು ದೊಡ್ಡ ಬಹಿರಂಗ ಸ್ವರೂಪವನ್ನು ಪಡೆಯಿತು ಮತ್ತು ಇತಿಹಾಸದಲ್ಲಿ ಅದು ದಾಖಲಿಯಾಗಿ ಹೋಗಿರತಕ್ಕ ಪ್ರಕರಣ ಮುಂದೆ ಕಳೆದ ಐವತ್ತು ವರ್ಷಗಳಲ್ಲಿ ನಾವು ನಮ್ಮ ರಾಜ್ಯಾಂಗವನ್ನು ಹೇಗೆ ನಿರ್ವಹಣೆ ಮಾಡಿದ್ದೇವೆ ಎನ್ನುವುದರ ಬಗ್ಗೆ ವಿಶ್ಲೇಷಣೆ ಮಾಡತಕ್ಕ ಕಾಲದಲ್ಲಿ ಆ ಒಂದು ಘಟ್ಟದಲ್ಲಿ ಶ್ರೀ ಜತ್ತಿಯವರು ಹೇಗೆ ಮಾನಸಿಕ ತೊಳಲಾಟಕ್ಕೆ ಸಿಕ್ಕಿದ್ದರು ಎನ್ನುವುದರ ಬಗ್ಗೆ ಹಲವಾರು ದಾಖಲೆಗಳು ಮತ್ತು ವಿಶ್ಲೇಷಣೆಗಳು ಬರುತ್ತವೆ. ಶ್ರೀ ಜತ್ತಿಯವರ ಜೀವನದಿಂದ ನಾವು ಹಲವಾರು ವಿಚಾರಗಳನ್ನು ತಿಳಿದುಕೊಳ್ಳಬೇಕಾಗುತ್ತದೆ. ನಾನು ವಿಧಾನಸಭೆಯಲ್ಲಿ ಮಾಡಿದ ಮೊಟ್ಟ ಮೊದಲನೆಯ ಭಾಷಣ ಆದ ಮೇಲೆ ಶ್ರೀ ಜತ್ತಿಯವರು ನನಗೆ ಒಂದು ಸಣ್ಣ ಪತ್ರವನ್ನು ಕಳುಹಿಸಿ ನಾನು ಆ ಡಿಬೇಟ್‌ನಲ್ಲಿ ಏನು ಭಾಗವಹಿಸಿದೆ ಅದರ ಬಗ್ಗೆ ತಮ್ಮ ಮನದಾಳದ ಮೆಚ್ಚುಗೆಯನ್ನು ಸೂಚಿಸತಕ್ಕಂಥ ಹೃದಯ ಶ್ರೀಮಂತಿಕೆಯನ್ನು ಅವರು ಪಡೆದಿದ್ದರು ಎನ್ನತಕ್ಕದನ್ನು ಅತ್ಯಂತ ದೈನ್ಯತೆಯಿಂದ ಭಾವುಕನಾಗಿ ನಾನು ಸ್ಮರಿಸಿಕೊಳ್ಳುತ್ತೇನೆ. ವಿಧಾನ ಸಭೆಗೆ ಬಹಳ ಜನ ಮಾನ್ಯ ಸದಸ್ಯರುಗಳು ಹೊಸದಾಗಿ ಆರಿಸಿ ಬಂದಿದ್ದಾರೆ. ಹೊಸದಾಗಿ ಬಂದಿರತಕ್ಕ ಮಾನ್ಯ ಸದಸ್ಯರುಗಳು ಈ ಸದನದಲ್ಲಿ ನಡೆಯತಕ್ಕ ಚರ್ಚೆಗಳಲ್ಲಿ ಭಾಗವಹಿಸಿ ತಾವು ಅರ್ಥಪೂರ್ಣವಾದಂಥ ಕೊಡುಗೆಯನ್ನು ಕೊಡಬಲ್ಲ ಶಕ್ತಿ ಇದೆ ಎನ್ನತಕ್ಕದ್ದನ್ನು ತೋರಿಸಿ ಕೊಡತಕ್ಕ ದೃಷ್ಟಿಯಿಂದ ಅವರುಗಳೆಲ್ಲರೂ ಭಾಗವಹಿಸಬೇಕಾಗಿರತಕ್ಕದ್ದು. ಶ್ರೀ ಜತ್ತಿಯವರ ಒಂದು ಆದರ್ಶನವನ್ನು ನಾವು ಕಾರ್ಯರೂಪಕ್ಕೆ ತರಲಿಕ್ಕೆ ಸಾಧ್ಯವಾಗುತ್ತದೆಂದು ನಾನು ಭಾವಿಸುತ್ತೇನೆ. ಅವರು ಬಸವ ಭವನವನ್ನು ಕಟ್ಟಿದ್ದರು, ಬಸವ ವಚನಗಳನ್ನು ಇನ್ನು ಹೆಚ್ಚು ಜನಪ್ರಿಯವಾಗತಕ್ಕ ರೀತಿಯಲ್ಲಿ ಅವು ಶ್ರೀಸಾಮಾನ್ಯನ ಕೈಗೆಟುಕದ ವಿಚಾರ ಎನ್ನತಕ್ಕಂಥ ಒಂದು ಚಿಂತನೆಗೆ ಶ್ರೀ ಜತ್ತಿಯವರು ತಮ್ಮ ಕೊನೆಯ ವರ್ಷಗಳನ್ನು ವಿನಿಯೋಗಿಸಿದರು ಎನ್ನತಕ್ಕದನ್ನು ನೆನೆದಾಗ ಸಮಾಜಕ್ಕೆ, ಅಮುದಾಯಕ್ಕೆ ಅವರ ಕೊಡುಗೆ ಏನೆಂಬುದು ನಮಗೆ ಅರ್ಥವಾಗುತ್ತದೆ. ಪ್ರತಿ ವರ್ಷ ಜನವರಿ 26 ರಂದು ರಿಪಬ್ಲಿಕ್ ಡೇ ದಿನಾಚರಣೆಯಲ್ಲಿ ಮತ್ತು ಪ್ರತಿ ಆಗಸ್ಟ್ 15 ರಂದು ಸ್ವಾತಂತ್ರ್ಯ ದಿನಾಚರಣೆಯಲ್ಲಿ ಭಾಗವಹಿಸಲು ಅವರಿಗೆ ನಡೆಯಲು ಸಾಧ್ಯವಾಗದಿದ್ದರಿಂದ ಗಾಲಿ ಕುರ್ಚಿಯ ಮೇಲೆ ಕುಳಿತು ಅವರು ಪೆರೇಡ್ ಮೈದಾನಕ್ಕೆ ಬರುತ್ತಿದ್ದರು. ಇತ್ತೀಚಿನ ವರ್ಷಗಳಲ್ಲಿ ಪ್ರತಿ ವರ್ಷದ ಬಸವೇಶ್ವರರ ಹುಟ್ಟಿದ ದಿವಸವನ್ನು ನಾವು ಆಚರಣೆ ಮಾಡುತ್ತಿದ್ದೇವೆ. ಅದರಲ್ಲಿ ಶ್ರೀ ಜತ್ತಿಯವರು ಸಕ್ರಿಯವಾಗಿ ಭಾಗವಹಿಸುತ್ತಿದ್ದರು ಎನ್ನತಕ್ಕದ್ದನ್ನು ನಾವು ನೋಡಿದ್ದೇವೆ. ಮಾನ್ಯ ಸಿದ್ದವನಹಳ್ಳಿ ನಿಜಲಿಂಗಪ್ಪನವರಂತೆ ಮಾನ್ಯ ಬಸಪ್ಪ ದಾನಪ್ಪ ಜತ್ತಿಯವರೂ ತುಂಬು ಜೀವನವನ್ನು ನಡೆಸಿದರು. ಜೀವನದಲ್ಲಿ ಅವರು ಕೈಲಾಸವನ್ನು ಕಂಡರು. ಮತ್ತು ಕೊನೆಯ ಉಸಿರು ಇರುವವರೆಗೂ ಕೂಡ ಅವರು ಒಂದಲ್ಲಾ ಒಂದು ಜವಾಬ್ದಾರಿಯನ್ನು ತಮ್ಮದಾಗಿ ಮಾಡಿಕೊಂಡು ಆ ಜವಾಬ್ದಾರಿಗಳನ್ನು ಉತ್ತಮವಾಗಿ ನಿರ್ವಹಿಸುವುದಕ್ಕೆ ಪ್ರಯತ್ನ ಪಟ್ಟರು.

ಅವರ ನಿಧನದಿಂದ ನಮ್ಮ ದೇಶದ ಸಾರ್ವಜನಿಕ ಜೀವನದಲ್ಲಿ ಬಹಳ ದೊಡ್ಡ ಶೂನ್ಯವನ್ನು ಅವರು ಸೃಷ್ಟಿ ಮಾಡಿ ಹೋಗಿದ್ದಾರೆ. ಮಾನ್ಯ ಬಸಪ್ಪದಾನಪ್ಪ ಜತ್ತಿಯವರು ಬಾಗಲಕೋಟೆ ಜಿಲ್ಲೆಯ ಜಮಖಂಡಿಯಲ್ಲಿ ಒಂದು ಸಣ್ಣ ರೈತ ಕುಟುಂಬದಲ್ಲಿ ಜನಿಸಿ ಈ ದೇಶದ ಅತ್ಯುನ್ನತ ಪದವಿಗೆ ಅವರು ಹತ್ತಿದ್ದರು, ಆ ಪದವಿಯನ್ನು ಮುಟ್ಟಿದರು. ಹಾಗೆ ಆ ಪದವಿಯನ್ನು ಮುಟ್ಟಿದ್ದು. ಒಂದು ಅಲ್ಲ, ಆ ಪದವಿಯಲ್ಲಿ ತಮ್ಮ ಪಡಿಯಚ್ಚನ್ನು ಬಿಟ್ಟರು ಎನ್ನತಕ್ಕದ್ದು ನಾವು ನೆನೆಯಲೇಬೇಕಾಗಿರುವ ವಿಚಾರ. ಅವರ ಆತ್ಮಕ್ಕೆ ಶಾಂತಿಯನ್ನು ಕೋರುವ ಅವಕಾಶವನ್ನು ಈಗ ನಾನು ಉಪಯೋಗಿಸಿಕೊಳ್ಳುತ್ತಿದ್ದೇನೆ.

ಶ್ರೀ ದತ್ತಾತ್ರೇಯ ವೈಂಗಣಕರ್ ರವರು ನಮ್ಮ ಮಜ್‌ದೂರ್ ಸಂಘದ ಅಧ್ಯಕ್ಷರಾಗಿ ಬ್ಲಾಕ್ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಿ ಸಹಕಾರಿ ಕ್ಷೇತ್ರದಲ್ಲಿ ಬಹಳ ದೊಡ್ಡ ಸೇವೆಯನ್ನು ಮಾಡಿದರು. ಹಾಗೆಯೇ ಶ್ರೀ ಬಿ. ಪುಟ್ಟಣ್ಣನವರು ಪ್ರಜಾಪ್ರತಿನಿಧಿ ಸಭೆಯಲ್ಲಿ ಸದಸ್ಯರಾಗಿ ಜನಸಾಮಾನ್ಯರ ಪ್ರತಿನಿಧಿಗಳಾಗಿದ್ದರು. "ಕಾರ್ಮೆಡ್ ಸೂರಿ" ಶ್ರೀ ಎಸ್. ಸೂರ್ಯನಾರಾಯಣ ರಾವ್ ರವರನ್ನು ನಾನು ಕಳೆದ ನಲವತ್ತು ವರ್ಷಗಳಿಂದ ಬಲ್ಲೆ. ನಾನು ಈ ರಾಜ್ಯದ ಉದ್ದಿಮೆಯ ಸಚಿವಾಗಿದ್ದಂಥ ಕಾಲದಲ್ಲಿ ಮಾನ್ಯ ಸೂರ್ಯನಾರಾಯಣರಾವ್ ರವರು ಅತ್ಯಂತ ಪ್ರತಿಷ್ಠಿತ ಮಜದೂರ್ ಮುಖಂಡರಾಗಿದ್ದರು. ಆಗಿನ ಕಾಲದಲ್ಲಿ ಟ್ರೇಡ್ ಯೂನಿಯನ್ ಮೂವ್‌ಮೆಂಟ್ ಬಹಳ ಪ್ರಭಾವಶಾಲಿಯಾಗಿ ಬೆಳೆಯುತ್ತಿದ್ದಂಥ ದಿನಗಳು ಅವು ಅಂಥ ಒಂದು ದೊಡ್ಡ ಮನ್ನಣೆಯನ್ನು ಶ್ರಮಜೀವಿಗಳ ಕ್ಷೇತ್ರದಲ್ಲಿ ಕಾಮ್ರೆಡ್ ಸೂರಿಯವರು ಪಡೆದಿದರು. ಅವರು ಸಿ.ಐ.ಟಿ.ಐ. ರಾಜ್ಯ ಘಟಕದ ಅಧ್ಯಕ್ಷರಾಗಿದ್ದರು, ಹಾಗೂ ಅಖಿಲ ಭಾರತ ಸಿ.ಐ.ಟಿ.ಐ. ಘಟಕದ ಉಪಾಧ್ಯಕ್ಷರಾಗಿದ್ದರು ಮತ್ತು ಕೇಂದ್ರ ಸಮಿತಿಯ ಸದಸ್ಯರಾಗಿದ್ದರು. ಅವರು ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿ, ನಮ್ಮ ದೇಶದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿ ತಮ್ಮನ್ನೇ ಅರ್ಪಿಸಿಕೊಂಡಿದ್ದರು. ವರ್ತೂರು ವಿಧಾನಸಭಾ ಕ್ಷೇತ್ರದಿಂದ ಅವರು ಈ ಸಭೆಯ ಸದಸ್ಯರಾಗಿ ಸೇವೆಯನ್ನು ಮಾಡಿದರು. ಅವರು ಗತಿಸಿಹೋಗತಕ್ಕ ಒಂದು ತಿಂಗಳ ಹಿಂದೆ ಸಾವಿರಾರು ಜನ ಕಾರ್ಮಿಕರನ್ನು ಕರೆದುಕೊಂಡು ಬಂದು ನನ್ನನ್ನು ಭೇಟಿ ಮಾಡಿದ್ದರು. ಆ ಸಂದರ್ಭದಲ್ಲಿ ಇದು ನನ್ನ ಅವರ ಕೊನೆಯ ಭೇಟಿಯಾಗುತ್ತದೆ ಎನ್ನತಕ್ಕಂಥ ಸೂಚನೆ ಯಾವುದೂ ಇರಲಿಲ್ಲ, ತುಂಬಾ ಆರೋಗ್ಯವಂತರಾಗಿ ಕಾಣುತ್ತಿದ್ದರು. ಆದರೆ ಅವರು ಹಠಾತ್ತನೆ ನಮ್ಮಿಂದ ಅಗಲಿ ಹೋಗಿದ್ದಾರೆ.

ಇನ್ನು ಶ್ರೀ ಎಸ್.ಎಲ್. ಶಕ್ಧರ್‌ರವರು ಸಂಸದೀಯ ವ್ಯವಹಾರಗಳಲ್ಲಿ ವಿಶೇಷವಾದಂಥ ಪರಿಣತಿಯನ್ನು ಪಡೆದಿದ್ದರು. ಅವರು ಬರೆದಿರತಕ್ಕಂಥ ಪುಸ್ತಕವನ್ನು ನಾವು ನೀವು ಹಲವಾರು ಜಟಿಲವಾದಂತಹ ಸಮಸ್ಯೆಗಳು, ಸಂಸದೀಯ ಸಮಸ್ಯೆಗಳು ನಮ್ಮ ಮುಂದೆ ಬಂದಾಗ ನಾವು ಶಕ್ಧರ್‌ರವರ ಪುಸ್ತಕವನ್ನು ಒಂದು ರೆಫರೆನ್ಸ್ ಪುಸ್ತಕವಾಗಿ ಉಪಯೋಗಿಸಿಕೊಳ್ಳಬೇಕೆಂದು ನಾನು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ. ಈ ಕ್ಷೇತ್ರದಲ್ಲಿ ಅವರು ಅಸಮಾನ್ಯ ಪರಿಣತಿಯನ್ನು ಪಡೆದಿದ್ದರು. ನಾನು 1968ನೇ ಇಸವಿಯಲ್ಲಿ ಲೋಕಸಭೆಗೆ ಆರಿಸಿ ಹೋದಾಗ ಶ್ರೀ ಶಕ್ಧರ್‌ರವರು ಲೋಕಸಭೆಯ ಸೆಕ್ರೆಟೇರಿಯಟ್‌ನಲ್ಲಿದ್ದರು, ಅನಂತರ ಅವರು ಅದರ ಸೆಕ್ರೆಟರಿ ಜನರಲ್ ಆಗಿದ್ದರು. ಒಂದೆರಡು ಬಾರಿ ಅವರ ಜೊತೆಯಲ್ಲಿ ಕಾಮನ್ ವೆಲ್ತ್ ಪಾರ್ಲಿಮೆಂಟರಿ ಕಾನ್‌ಫರೆನ್ಸ್

ಫಾರ್ ದಿ ಇಂಟರ್ ಪಾರ್ಲಿಮೆಂಟರಿ ಯೂನಿಯನ್ ಈ ಡೆಲಿಗೇಷನ್‌ನಲ್ಲಿ ಹೋಗತಕ್ಕಂತಹ ಅವಕಾಶ ನನ್ನದಾಗಿತ್ತು. ಶ್ರೀ ಶಕ್ಧರ್‌ರವರು ಕಾಶ್ಮೀರ ಪಂಡಿತರ ವಂಶದಿಂದ ಬಂದಿರತಕ್ಕವರು. ಕಾಶ್ಮೀರಿ ಪಂಡಿತರು ಯಾವಾಗಲೂ ಅತ್ಯಂತ ಚೂಪನೆಯ ಬುದ್ಧಿಶಕ್ತಿಯನ್ನು ಪಡೆದಿರತಕ್ಕ ಜನರೆಂದು ನಾವು ಗುರುತಿಸಿದ್ದೇವೆ.

ಶ್ರೀ ಶಕ್ಧರ್ ಮತ್ತು ಶ್ರೀ ಕೌಲ್‌ರವರು ಬರೆದಿರತಕ್ಕಂತ ರೀಸರ್ಚ್ ಡಾಕ್ಯುಮೆಂಟ್ ಏನಿದೆ, ಅದು ಇನ್ನೂ ಹತ್ತಾರು ವರ್ಷಗಳ ಕಾಲ ಪಾರ್ಲಿಮೆಂಟೇರಿಯನ್ಸ್ ಮತ್ತು ಲೆಜಿಸ್ಲೇಟರ್‌ಗಳಿಗೆ ಒಂದು ರೀತಿಯಲ್ಲಿ ದಾರಿದೀಪವಾಗುತ್ತದೆ ಎನ್ನುವ ಮಾತುಗಳನ್ನು ಅವರ ಪ್ರಶಂಸೆ ಮತ್ತು ಗುಣಗಾನವನ್ನು ಮಾಡತಕ್ಕಂಥ ಈ ಒಂದು ಸಂದರ್ಭದಲ್ಲಿ ಹೇಳಬೇಕಾಗಿದೆ. ಇವರಿಗೆಲ್ಲರಿಗೂ ಕೂಡ ನಮ್ಮ ಪಕ್ಷದ ಪರವಾಗಿ ಮತ್ತು ಸರ್ಕಾರದ ಪರವಾಗಿ ನಾನು ಶ್ರದ್ಧಾಂಜಲಿಗಳನ್ನು ಅರ್ಪಿಸುತ್ತೇನೆ. ಇವರೆಲ್ಲರ ಆತ್ಮಕ್ಕೆ ಶಾಂತಿ ಸಿಗಲೆಂದು ನಾನು ಪ್ರಾರ್ಥಿಸುತ್ತೇನೆ.

ಅಧ್ಯಕ್ಷರು.- ಮಾನ್ಯ ಸಂಸದೀಯ ಸಚಿವರು ಡಾ|| ವೆಂಕಟಲಕ್ಷ್ಮಮ್ಮನವರ ಹೆಸರನ್ನೂ ಸಹಾ ಇಂದಿನ ಸಂತಾಪ ಸೂಚಕ ನಿರ್ಣಯದಲ್ಲಿ ಪ್ರಸ್ತಾಪಿಸಬೇಕೆಂದು ಸೂಚಿಸಿದ್ದಾರೆ. ದಯವಿಟ್ಟು ಮಾನ್ಯ ಸದಸ್ಯರುಗಳು ಮಾತನಾಡುವಾಗ ಅವರ ಹೆಸರನ್ನೂ ಸೇರಿಸಿಕೊಂಡು ಈ ನಿರ್ಣಯದ ಮೇಲೆ ಮಾತನಾಡಬೇಕೆಂದು ಕೋರುತ್ತೇನೆ.

+ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು).- ಮಾನ್ಯ ಅಧ್ಯಕ್ಷರೇ, ತಾವು ಮಂಡಿಸಿರುವಂತಹ ಸಂತಾಪ ಸೂಚಕ ನಿರ್ಣಯಕ್ಕೆ ನಾನು ಬೆಂಬಲವನ್ನು ವ್ಯಕ್ತಪಡಿಸುತ್ತೇನೆ. ಕರ್ನಾಟಕ ರಾಜ್ಯದ ಮಾಜಿ ಮುಖ್ಯಮಂತ್ರಿಗಳಾಗಿ ಕರ್ನಾಟಕದ ಮತ್ತು ದೇಶದ ರಾಜಕಾರಣದಲ್ಲಿ ತಮ್ಮದೇ ಆದಂತಹ ವರ್ಚಸ್ಸನ್ನು ಛಿತ್ತಿ ಹೋದಂತಹ ವ್ಯಕ್ತಿತ್ವ ಮಾನ್ಯ ಬಸಪ್ಪ ದಾನಪ್ಪ ಜತ್ತಿಯವರದಾಗಿತ್ತು. ಮಾನ್ಯ ಜತ್ತಿಯವರು ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು ಎಂಬಂತೆ ಕಾರ್ಯನಿರ್ವಹಿಸಿದ್ದರು. ಉತ್ತರ ಭಾರತದಲ್ಲಿ ಜತ್ತಿಯವರನ್ನು ಜತ್ತಿ ಎನ್ನದೇ 'ಜಟ್ಟಿ' ಎಂದೇ ಪ್ರೀತಿಯಿಂದ ಕರೆಯುತ್ತಿದ್ದರು. ನಮ್ಮ ಕಡೆ ಕುಸ್ತಿ ಪೈಲ್ವಾನ್‌ರಿಗೆ ಜಟ್ಟಿ ಎಂದು ನಾವು ಹೇಳುತ್ತೇವೆ. ಅವರ ವ್ಯಕ್ತಿತ್ವ ಸಣ್ಣದು, ಹೀಗಿದ್ದಾಗ ಅವರನ್ನು ಉತ್ತರ ಭಾರತದವರು 'ಜಟ್ಟಿ' ಎಂದು ಏಕೆ ಕರೆಯುತ್ತಿದ್ದರು ಎಂದರೆ, ಈ ಒಂದು ರಾಜಕಾರಣದಲ್ಲಿ ಅತ್ಯಂತ ಕ್ಲಿಷ್ಟಕರ ವ್ಯೂಹಗಳನ್ನು ಛೇದಿಸಿ, ಸರಳವಾಗಿ ಅದನ್ನು ಬಗೆಹರಿಸುವಂತಹ ಉಪಾಯಗಳು ಮಾನ್ಯ ಜತ್ತಿಯವರಲ್ಲಿ ಇದ್ದುದ್ದರಿಂದ ಅವರನ್ನು ಜಟ್ಟಿ ಎಂದು ಕರೆಯುತ್ತಿದ್ದರು ಎಂದು ನನಗನ್ನಿಸುತ್ತಿದೆ. ಹಳ್ಳಿಯ ಸಣ್ಣ ರಾಜಕಾರಣದಿಂದ ಹಿಡಿದು ದಿಲ್ಲಿಯ ದೊಡ್ಡ ರಾಜಕಾರಣದವರೆಗೆ ಮುಟ್ಟಿದಂತಹ ವ್ಯಕ್ತಿ ಮಾನ್ಯ ಜತ್ತಿಯವರಾಗಿದ್ದರು. ಹಿಂದಿನ ಬಿಜಾಪುರ ಜಿಲ್ಲೆಯ ಮತ್ತು ಈಗಿನ ಬಾಗಲಕೋಟೆ ಜಿಲ್ಲೆಯ ಜಮಖಂಡಿ ತಾಲ್ಲೂಕಿನ ಸಾವಳಗಿ ಗ್ರಾಮದಲ್ಲಿ ಹುಟ್ಟಿ ತಮ್ಮ ಜೀವನವನ್ನು ಆರಂಭಿಸಿದ ಅವರು ತಾಲ್ಲೂಕು ಪಂಚಾಯಿತಿ ಸದಸ್ಯರಾಗಿ, ಜಮಖಂಡಿ ನಗರಸಭೆಯ ಅಧ್ಯಕ್ಷರಾಗಿ ಮತ್ತು ಜಮಖಂಡಿ ಸಂಸ್ಥಾನದ ಮುಖ್ಯಮಂತ್ರಿಗಳಾಗಿ ಅವರು ತಮ್ಮ ಸೇವೆಯನ್ನು ಸಲ್ಲಿಸಿದ್ದರು. ಮುಂದೆ ಮುಂಬೈ ರಾಜ್ಯದ ಉಪ-ಮಂತ್ರಿಗಳಾಗಿ ಅವರು ತಮ್ಮ ಸೇವೆಯನ್ನು ಸಲ್ಲಿಸಿದರು. ಅಂದಿನ ಮೈಸೂರು ಸಂಸ್ಥಾನದ ಮತ್ತು ಈಗಿನ ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳಾಗಿ ಈ ಒಂದು ನಾಡಿಗೆ ತಮ್ಮ ಸೇವೆಯನ್ನು ಅವರು ಸಲ್ಲಿಸಿದರು. ಮುಖ್ಯಮಂತ್ರಿಗಳಾಗಿ ಅವರು ಅಲ್ಪ ಕಾಲ

ಮಾತ್ರ ಉಳಿಯಬಹುದು ಎನ್ನುವಂತಹ ನಿರೀಕ್ಷೆಯನ್ನು ಅವರು ಸುಳ್ಳು ಮಾಡಿ ಮೂರು ವರ್ಷ ಒಂಭತ್ತು ತಿಂಗಳವರೆಗೆ ಅವರು ಮುಖ್ಯಮಂತ್ರಿಗಳಾಗಿ ಈ ನಾಡಿಗೆ ಸೇವೆಯನ್ನು ಸಲ್ಲಿಸಿದರು. ಅವರ ಅಧಿಕಾರದ ಅವಧಿಯಲ್ಲಿ ಅವರು ಆಡಳಿತದಲ್ಲಿ ಬಿಗಿಯನ್ನು ತೆಗೆದುಕೊಂಡು ಬಂದರು. ಕಡತಗಳ ವಿಲೇವಾರಿಯಲ್ಲಿ ಅವರು ಬಹಳ ತೀವ್ರ ಗತಿಯನ್ನು ತಂದದ್ದನ್ನು ನಾವು ನೋಡಬಹುದು. ಹೀಗೆ ಒಂದು ಪ್ರಾಮಾಣಿಕವಾದಂತಹ ಮತ್ತು ಸ್ಪಷ್ಟ, ನೇರವಾದಂತಹ ಆಡಳಿತವನ್ನು ಮಾನ್ಯ ಜತ್ತಿಯವರು ನೀಡಿದರು ಎನ್ನುವುದರಲ್ಲಿ ಎಳ್ಳಷ್ಟೂ ಸಂಶಯವಿಲ್ಲ. ಅದೇ ಸಂದರ್ಭದಲ್ಲಿ ಅವರು ಮುಖ್ಯಮಂತ್ರಿಗಳಾಗಿ, ಅನಂತರ ಮತ್ತೆ ಜಮಖಂಡಿಯಿಂದ ಆರಿಸಿ ಬಂದು ಆಹಾರ ಮಂತ್ರಿಗಳಾಗಿ ಮತ್ತು ಇನ್ನಿತರ ಹಲವಾರು ಪ್ರಮುಖ ಖಾತೆಗಳನ್ನು ವಹಿಸಿಕೊಂಡು ಮಾನ್ಯ ನಿಜಲಿಂಗಪ್ಪವರ ಕಾಲದಲ್ಲಿ ಈ ನಾಡಿಗೆ ಸೇವೆ ಸಲ್ಲಿಸಿದರು. ಇದೇ ಸಂದರ್ಭದಲ್ಲಿ ಹುಬ್ಬಳ್ಳಿಯ ಕರ್ನಾಟಕ ಮೆಡಿಕಲ್ ಕಾಲೇಜ್‌ನ ಪ್ರಾರಂಭದ ಹಂತದಲ್ಲಿ, ಯೋಜನೆಗೆ ಹೆಚ್ಚು ಮುತುವರ್ಜಿಯನ್ನು ಮಾನ್ಯ ಜತ್ತಿಯವರು ಕೊಟ್ಟರು ಅದೇ ರೀತಿಯಲ್ಲಿ ಉತ್ತರ ಕರ್ನಾಟಕ ಭಾಗದ ಹಲವಾರು ಸುಧಾರಣೆಗಳಿಗೆ ಅವರು ಒತ್ತು ಕೊಟ್ಟರು ಎನ್ನುವುದನ್ನು ನಾನು ಈ ಸಂದರ್ಭದಲ್ಲಿ ನೆನಪಿಸಬಯಸುತ್ತೇನೆ. ಅದೇ ರೀತಿಯಲ್ಲಿ ಕರ್ನಾಟಕ ವಿಶ್ವವಿದ್ಯಾನಿಲಯದ ಸ್ಥಾಪನೆಯಲ್ಲಿ ಅವರು ಪ್ರಮುಖ ಪಾತ್ರವನ್ನು ವಹಿಸಿದರು. ಉತ್ತರ ಕರ್ನಾಟಕ ಭಾಗದ ಶೈಕ್ಷಣಿಕ ಅಭಿವೃದ್ಧಿಯಲ್ಲಿ ಅವರ ಕೊಡುಗೆ ಅಪಾರ ಎನ್ನುವುದನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇವತ್ತು ಅಧಿಕಾರ ಇದ್ದಾಗ ಒಬ್ಬ ವ್ಯಕ್ತಿ ಮೆರೆಯುತ್ತಾನೆ. ತನ್ನ ವ್ಯಕ್ತಿತ್ವವನ್ನು ಪರಿಚಯ ಮಾಡುತ್ತಾನೆ. ಅವರು ಅಧಿಕಾರ ಇಲ್ಲದಾಗಲೂ ಸಹಿತ ತಮ್ಮ ವ್ಯಕ್ತಿತ್ವವನ್ನು ಮೆರೆದರು. ಯಾರು ಈ ನಾಡಿನ ಮುಖ್ಯಮಂತ್ರಿಗಳಾಗಿದ್ದರೋ, ಮಂತ್ರಿಗಳಾಗಿದ್ದರೋ ಅವರು ಮುಂದೆ ಈ ದೇಶದ ಉಪರಾಷ್ಟ್ರಪತಿಗಳಾಗಿ ಆಯ್ಕೆಯಾದರು. ಅದಕ್ಕೆ ಮುಂಚೆ ಅವರು ಪಾಂಡಿಚೆರಿಯ ಲೆಫ್ಟಿನೆಂಟ್ ಗವರ್ನರ್ ಆಗಿ ಕೆಲಸ ಮಾಡಿದ್ದರು. ಕೆಲವು ಅವಧಿಯವರೆಗೆ ಹಂಗಾಮಿ ರಾಷ್ಟ್ರಪತಿಗಳಾಗಿ ಈ ದೇಶದ ಸೇವೆಯನ್ನು ಮಾನ್ಯ ಜತ್ತಿಯವರು ಮಾಡಿದರು. ಅಧಿಕಾರದಲ್ಲಿ ಇಲ್ಲದಂತಹ ಸಂದರ್ಭದಲ್ಲಿ, ಸಮಾಜ ಸುಧಾರಕ ಬಸವಣ್ಣನವರ ಕಾಯಕ ನಿಷ್ಠೆಯಲ್ಲಿ ತಮ್ಮ ನಿಷ್ಠೆಯನ್ನು ವ್ಯಕ್ತಪಡಿಸಿ, ಕರ್ಮ ಯೋಗದಿಂದಲೇ ಈ ಸಮಾಜದ ಸೇವೆ ಸಾಧ್ಯ, ಕಾಯಕ ನಿಷ್ಠೆಯಿಂದಲೇ ಈ ಸಮಾಜದಲ್ಲಿ ಸುಧಾರಣೆ ತರಲಿಕ್ಕೆ ಸಾಧ್ಯ ಎನ್ನುವಂತಹ ರೀತಿಯಲ್ಲಿ ಅವರು ಕೆಲಸ ಮಾಡಿದ್ದರು. ಬಸವಣ್ಣನವರ ವಚನಗಳ ಪ್ರಚಾರದಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳುವಂತಹ ಕೆಲಸವನ್ನು ಅವರು ಮಾಡಿದ್ದರು. ಬಸವ ಸಮಿತಿಯ ಮುಖಾಂತರ ಸಮಾಜದ ಸುಧಾರಣೆ, ಬಸವ ಭವನದ ಕಲ್ಪನೆ, ಇದರ ಮುಖಾಂತರ ತಮ್ಮ ಕಾಯಕ ನಿಷ್ಠೆಯನ್ನು ಸಮಾಜಕ್ಕೆ ಮಾನ್ಯ ಜತ್ತಿಯವರು ತೋರಿಸಿಕೊಟ್ಟರು. ಇವತ್ತಿಗೂ ನಮ್ಮ ಕಣ್ಣ ಮುಂದೆ ಅವರ ನೆನಪು ಇದೆ. 90 ವರ್ಷಗಳ ಕಾಲ ಅಖಂಡವಾಗಿ ಅವರು ತಮ್ಮ ಜೀವನವನ್ನು ಸಾಗಿಸಿದರು. ರಾಜಕೀಯ ಅಧಿಕಾರದಲ್ಲಿ ಇಲ್ಲದೇ ಇದ್ದಾಗಲೂ ಸಹ ನಾವು ಕ್ರಿಯಾಶೀಲರಾಗಿರಬಲ್ಲೆವು ಎಂಬುದನ್ನು ಮಾನ್ಯ ಜತ್ತಿಯವರು ತೋರಿಸಿದರು. ಅದೇ ರೀತಿಯಲ್ಲಿ ಮಾನ್ಯ ನಿಜಲಿಂಗಪ್ಪನವರೂ ಸಹ ಬಾಳಿದರು. ಅಧಿಕಾರ ಆದ ಮೇಲೆ ಸಮಾಜದಲ್ಲಿ ಏನು ನಡೆಯುತ್ತಿದೆ, ಸಮಾಜ ಸುಧಾರಣೆಗೆ ನಾವು ಏನು ಮಾಡಬೇಕು, ರಾಜಕೀಯ ವ್ಯವಸ್ಥೆ ಸುಧಾರಣೆಗೆ ನಾವು ಏನು ಮಾಡಬೇಕು ಎನ್ನುವಂತಹ ಚಿಂತನೆಯನ್ನು ಮಾನ್ಯ ಬಿ.ಡಿ. ಜತ್ತಿಯವರು ಮಾಡಿದ್ದರು. ಕೊನೆಯ ಉಸಿರು ಇರುವವರೆಗೂ ಸಮಾಜದ

ಬಗ್ಗೆ ಚಿಂತನೆಯನ್ನು ಮಾಡಿದಂತಹ ವ್ಯಕ್ತಿ ಶ್ರೀ ಬಿ.ಡಿ. ಜತ್ತಿಯವರಾಗಿದ್ದರು. ಅವರ ಸರಳ ಸಜ್ಜನಿಕೆಯ ವ್ಯಕ್ತಿತ್ವ ನಮ್ಮ ಕಣ್ಣ ಮುಂದೆ ಇದೆ. ಅದನ್ನು ನೆನಪಿಸಿಕೊಂಡು, ಜನಪ್ರತಿನಿಧಿಗಳಾದ ನಾವುಗಳೆಲ್ಲರೂ ಆ ಸರಳ ಸಜ್ಜನಿಕೆಯ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳಬೇಕು. ಅವರ ಆದರ್ಶನವನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು, ಅದರ ಮುಖಾಂತರ ಮಾನ್ಯ ಬಿ.ಡಿ. ಜತ್ತಿಯವರ ಆತ್ಮಕ್ಕೆ ನಾವು ಶಾಂತಿ ಕೋರಬಹುದು ಎಂಬ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳಬಯಸುತ್ತೇನೆ. ಮಾನ್ಯ ದತ್ತಾತ್ರೇಯ ವೈಂಗಣಕರ್ ಮತ್ತು ಮಾನ್ಯ ಬಿ. ಪುಟ್ಟಣ್ಣನವರ ನಿಧನಕ್ಕೂ ಸಹ ನಾನು ಶ್ರದ್ಧಾಂಜಲಿಯನ್ನು ವ್ಯಕ್ತಪಡಿಸುತ್ತೇನೆ. ಮಾನ್ಯ ಎಸ್. ಸೂರ್ಯನಾರಾಯಣ ರಾವ್ ಅವರನ್ನು 'ಸೂರಿ' ಎಂದು ಆತ್ಮೀಯವಾಗಿ ಅವರ ಮಿತ್ರರು ಸಮಾಜದಲ್ಲಿ ಅವರನ್ನು ಕರೆಯುತ್ತಿದ್ದರು. ಕಾರ್ಮಿಕ ಮುಖಂಡರಾಗಿ, ಎಡ ಪಂಥೀಯ ವಿಚಾರಧಾರೆಯಲ್ಲಿ ತಮ್ಮ ಜೀವನವನ್ನೇ ತೊಡಗಿಸಿಕೊಂಡು, ಆ ತತ್ವಕ್ಕಾಗಿ ಯಾವಾಗಲೂ ಹೋರಾಟವನ್ನೇ ಮಾಡಿದಂತಹ ವ್ಯಕ್ತಿ ಶ್ರೀ ಸೂರ್ಯನಾರಾಯಣ್‌ರಾವ್ ರವರಾಗಿದ್ದರು. ವರ್ತೂರು ವಿಧಾನಸಭಾ ಕ್ಷೇತ್ರದಿಂದ ಅವರು ವಿಧಾನ ಸಭೆಗೆ ಆಯ್ಕೆಯಾಗಿ, ಈ ಒಂದು ಸದನದಲ್ಲಿ ಕಾರ್ಮಿಕರ ಸಂಘಟನೆ, ಕಾರ್ಮಿಕರ ಸಮಸ್ಯೆಗಳ ಬಗ್ಗೆ ಸಾಕಷ್ಟು ಹೋರಾಟವನ್ನು ಮಾಡಿದಂತಹ ವ್ಯಕ್ತಿ ಸೂರ್ಯನಾರಾಯಣ್ ರವರಾಗಿದ್ದರು. ಅವರ ಜೊತೆಗೆ ಎಡ ಪಂಥೀಯ ವಿಚಾರ ಧಾರೆ ಉಳ್ಳವರಾಗಿದ್ದಂತಹ ಮಾನ್ಯ ಎಂ.ಎಸ್. ಕೃಷ್ಣನ್‌ರವರೂ ಸಹ ಸೇರಿದ್ದರು. ಮಾನ್ಯ ಎಂ.ಎಸ್. ಕೃಷ್ಣನ್ ಮತ್ತು ಮಾನ್ಯ ಸೂರ್ಯನಾರಾಯಣರಾವ್ ರವರ ಜೋಡಿ ಕರ್ನಾಟಕದಲ್ಲಿ ಸಾಕಷ್ಟು ಕಾರ್ಮಿಕರ ಹೋರಾಟಗಳಿಗೆ ನಾಂದಿ ಹಾಡಿತು ಎನ್ನುವುದನ್ನು ಈ ಸಂದರ್ಭದಲ್ಲಿ ನಾನು ನೆನಪಿಸಿಕೊಳ್ಳಬಯಸುತ್ತೇನೆ. ಕಾರ್ಮಿಕರ ಸಂಘಟನೆಗಾಗಿ ದುಡಿದಂತಹ ಮಾನ್ಯ ಅಲ್ಲಂಪಳ್ಳಿ ವೆಂಕಟರಾಮ್ ರವರಂತಹ ಮಹಾನ್ ನಾಯಕರ ಸಾಲಿನಲ್ಲಿ ನಮ್ಮ ಮಾನ್ಯ ಸೂರ್ಯನಾರಾಯಣರಾವ್ ನಿಲ್ಲುತ್ತಾರೆ. ಇವತ್ತಿನ ಜಾಗತೀಕರಣದ ವ್ಯವಸ್ಥೆಯಲ್ಲಿ ಕಾರ್ಮಿಕರ ಸಂಘಟನೆಗೆ ಒತ್ತು ಕೊಟ್ಟು ಕಾರ್ಮಿಕರ ಸಮಸ್ಯೆಗಳಿಗೆ ಸ್ಪಂದನೆ ಮಾಡತಕ್ಕದ್ದು ಎಲ್ಲೋ ಒಂದು ಹಂತದಲ್ಲಿ ಕಡಿಮೆಯಾಗುತ್ತಿದೆ ಏನೋ ಎನ್ನುವಂತಹ ಕೊರಗು ಇವತ್ತು ನಮ್ಮಲ್ಲಿ ಕಾಣಿಸುತ್ತಿದೆ.

11.40 ಎ.ಎಂ

ಇತ್ತೀಚಿನ ದಿನಗಳಲ್ಲಿ ಈ ಸದನದಲ್ಲಿ ಕಾರ್ಮಿಕ ಸಂಘಟನೆಯಿಂದ, ಕಾರ್ಮಿಕ ಹೋರಾಟಗಾರರ ನಾಯಕರಾಗಿ ಬೆಳೆದು ಬಂದ ವ್ಯಕ್ತಿಗಳಿಗೆ ಪ್ರಾತಿನಿಧ್ಯ ಇಲ್ಲ ಎನ್ನುವ ಕೊರಗನ್ನು ನಾನು ಕಾಣುತ್ತಿದ್ದೇನೆ. ಇಡೀ ನಾಡಿನಲ್ಲಿ ಕಾರ್ಮಿಕ ಸಂಘಟನೆಗೆ ಕೊರತೆ ಉಂಟಾಗಿದೆ. ಕಾರ್ಮಿಕರ ಕೂಗಿಗೆ ಕೊರತೆ ಉಂಟಾಗಿದೆ ಎಂದು ಹೇಳುತ್ತಾ, ಆ ಒಂದು ಕೊರತೆಯನ್ನು ತುಂಬುವಂತಹ ಕೆಲಸ ಇವತ್ತು ಆಗಬೇಕಾಗಿದೆ ಎಂದು ಈ ಸಂದರ್ಭದಲ್ಲಿ ಹೇಳಿ, ಇನ್ನು ಶ್ರೀ ಎಸ್.ಎಲ್. ಶಕ್ಧರ್ ಬಗ್ಗೆ ಹೇಳುವಂತಹ ವಿಚಾರ, ಶ್ರೀ ಕೌಲ್ ಮತ್ತು ಶಕ್ಧರ್ ಈ ಜೋಡಿ ವಿಧಾನಸಭೆ ಇರಲಿ, ಕೌನ್ಸಿಲ್ ಇರಲಿ ಪಾರ್ಲಿಮೆಂಟ್ ಇರಲಿ, ರಾಜ್ಯಸಭೆ ಇರಲಿ, ಯಾವುದೇ ಒಂದು ಕ್ಲಿಷ್ಟಕರವಾದ ಸಮಸ್ಯೆಗಳು ಬಂದಾಗ, ಅದರಲ್ಲಿ ಸಭಾಧ್ಯಕ್ಷರು ಹಲವಾರು ನಿರ್ಣಯಗಳನ್ನು ಕೈಗೊಳ್ಳುವಂತಹ ಸಂದರ್ಭದಲ್ಲಿ ಇವತ್ತು ನಮಗೆ ಯಾವುದೇ ಆಧಾರದ ಇದ್ದರೆ, ಆ ಸಮಸ್ಯೆಗೆ ಪರಿಹಾರ ಹುಡುಕುವ ಆಧಾರ ಎಂದರೆ ಕೌಲ್ ಮತ್ತು ಶಕ್ಧರ್ ಅವರ ಬುಕ್ಕು. "ಪ್ರಾಕ್ಟೀಸ್

ಅಂಡ್ ಪ್ರೋಸೀಜರ್ ಆಫ್ ಪಾರ್ಲೀಮೆಂಟ್" ಇನ್ನಿತರ ಹಲವಾರು ಪುಸ್ತಕಗಳನ್ನು ಈ ಜೋಡಿ ಬರೆದಿದೆ. ಈ ಎಲ್ಲಾ ಸಮಸ್ಯೆಗಳಿಗೆ ನಾವು ಪರಿಹಾರವನ್ನು ಆ ಪುಸ್ತಕಗಳ ಮುಖಾಂತರ ನಾವು ಪಡೆಯಬಹುದು. ಅದರ ಬಗ್ಗೆ ಸಾಕಷ್ಟು ಅಭ್ಯಾಸ ಮಾಡಿ ಪಾರ್ಲಿಮೆಂಟಿನಲ್ಲಿ ಕಾರ್ಯದರ್ಶಿಗಳಾಗಿ ಮುಖ್ಯವಾದ ಹುದ್ದೆಗಳನ್ನು ಪಡೆದು, ಶಕ್ಧರ್‌ರವರು ಈ ಒಂದು ವ್ಯವಸ್ಥೆಗೆ ತಮ್ಮ ಹೆಚ್ಚಿನ ಕೊಡುಗೆಯನ್ನು ಕೊಟ್ಟಿದ್ದಾರೆಂದು ಈ ಸಂದರ್ಭದಲ್ಲಿ ನೆನಪಿಸುತ್ತಾ ಇವತ್ತು ಅಗಲಿ ಹೋಗಿರುವಂತಹವರ ಆತ್ಮಕ್ಕೆ ಶಾಂತಿಯನ್ನು ಕೋರಿ ಅವರ ಮಾರ್ಗದರ್ಶನದಲ್ಲಿ ನಾವೆಲ್ಲಾ ನಡೆಯೋಣವೆಂದು ಹೇಳಿ ನನ್ನ ಶ್ರದ್ಧಾಂಜಲಿಯನ್ನು ಅರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ).- ಸನ್ಮಾನ್ಯ ಅಧ್ಯಕ್ಷರೆ, ತಾವು ಮಂಡಿಸಿರತಕ್ಕಂತಹ ಸಂತಾಪ ಸೂಚನೆ ಬಗ್ಗೆ ನಾನು ನನ್ನ ಸಮ್ಮತಿಯನ್ನು ಕನ್ನಡಿಗರ ಕೀರ್ತಿಯನ್ನು ದೆಹಲಿಯಲ್ಲಿ ಏರಿಸಿ ರಾಷ್ಟ್ರದ ಅಧ್ಯಕ್ಷರಾಗಿ ನಮ್ಮೆಲ್ಲರಿಗೂ ಕೀರ್ತಿಯನ್ನು ತಂದಂತಹ ಮಹಾನ್ ನಾಯಕರು ಶ್ರೀಮಾನ್ ಬಸಪ್ಪ ದಾನಪ್ಪ ಜತ್ತಿಯವರು. ಮಾನ್ಯ ಜತ್ತಿಯವರು ಪೂರ್ಣ ಜೀವನವನ್ನು ನಡೆಸಿದವರು. ಬಸವಣ್ಣನವರ ತತ್ವಗಳನ್ನು ಕೇವಲ ಬೋಧನೆ ಮಾಡಿದವರಲ್ಲ, ಅನುಷ್ಠಾನ ಮಾಡಿಂದತಹ ಒಬ್ಬ ಮಹಾನ್ ವ್ಯಕ್ತಿ. ಬಸವಣ್ಣನವರ ತತ್ವಗಳನ್ನು ಇಡೀ ಮಾನವ ಜನಾಂಗ ಅನುಸರಿಸಬೇಕೆಂಬ ವಿಚಾರಕ್ಕೆ ಇವರು ತಮ್ಮ ಜೀವನದ ಕೊನೆಯವರೆಗೂ ಕೂಡ ಪ್ರತಿಪಾದನೆ ಮಾಡಿದಂತಹ ಮಹಾನ್ ನಾಯಕರು. ಮಾನ್ಯ ಜತ್ತಿಯವರು ವಿಶೇಷವಾಗಿ ರಾಷ್ಟ್ರಪತಿಗಳಾಗಿದ್ದು ನಮ್ಮ ರಾಷ್ಟ್ರದಲ್ಲಿ ಒಬ್ಬ ಸಾಮಾನ್ಯವಾದ ಮನುಷ್ಯ, ಒಬ್ಬ ಪುರಸಭಾ ಅಧ್ಯಕ್ಷರಾಗಿದ್ದವರು, ಪುರಸಭೆ ಸದಸ್ಯರಾಗಿದ್ದವರು ಬೃಹತ್ ರಾಷ್ಟ್ರದ ರಾಷ್ಟ್ರಪತಿಗಳಾಗುವುದಕ್ಕೆ ಸಾಧ್ಯ, ನಮ್ಮ ಪ್ರಜಾಪ್ರಭುತ್ವ ಎಷ್ಟೊಂದು ಗಟ್ಟಿಯಾಗಿ ಇದೆ ಎನ್ನುವುದಕ್ಕೆ ಒಂದು ಉದಾಹರಣೆ ಅಷ್ಟೇ ಅಲ್ಲ, ಇದೊಂದು ಬೇರೆ ದೇಶಗಳಿಗೆ ಅನುಕರಣೀಯವಾದುದು ಎಂದು ನಾನು ಹೇಳುವುದಕ್ಕೆ ಬಯಸುತ್ತೇನೆ. ಮಾನ್ಯ ಜತ್ತಿಯವರು ಅವರು ಮುಖ್ಯಮಂತ್ರಿಗಳಾಗಿದ್ದರು, ಮಂತ್ರಿಗಳಾಗಿದ್ದರು, ರಾಷ್ಟ್ರಾಧ್ಯಕ್ಷರೂ ಆಗಿದ್ದರೂ. ಬಹಳ ಬುದ್ಧಿವಂತರಾಗಿದ್ದರು. ಬಹಳ ತೀಕ್ಷ್ಣಮತಿಗಳಾಗಿದ್ದರು. ಅವರಿಗೆ ಒಳ್ಳೆಯ ಜ್ಞಾಪಕ ಶಕ್ತಿ ಇತ್ತು. ನಾವು ಈ ವರ್ಷ ಬಸವ ಜಯಂತಿ ಆಚರಣೆ ಮಾಡಿದಾಗ ಅವರ ಆರೋಗ್ಯ ಅಷ್ಟೊಂದು ಚೆನ್ನಾಗಿ ಇರಲಿಲ್ಲ. ಕೆಲವು ದಿನಗಳ ಹಿಂದೆ ಸುಮಾರು ಎಂಟು-ಹತ್ತು ತಿಂಗಳುಗಳ ಹಿಂದೆ ನಾನು ಅವರಿಗೆ ಭೇಟಿ ಮಾಡಿದ್ದೆ. ನಾನು ಭೇಟಿ ಮಾಡಿದಾಗ ಎರಡು ಘಟನೆಗಳನ್ನು ಅವರು ನೆನೆಸಿಕೊಂಡಿದ್ದು ನೋಡಿದಾಗ ನನಗೆ ಬಹಳ ಅಶ್ಚರ್ಯವಾಯಿತು. 1970ನೇ ಇಸವಿಯಲ್ಲಿ ನಾನು ಬೆಂಗಳೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿ ಮುಖಂಡನಾಗಿದ್ದ ಸಂದರ್ಭದಲ್ಲಿ ಅವರು ಪಾಂಡಿಚೆರಿಯ ಲೆಫ್ಟಿನೆಂಟ್ ಗವರ್ನರ್ ಆಗಿದ್ದರು. ಅವರಿಗೆ ಮನಸ್ಸಿನಲ್ಲಿ ಬಹಳ ಅಸಮಾಧಾನ ಇತ್ತು. ಆಗತಾನೇ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದಿತ್ತು. ಮಾನ್ಯ ದೇವರಾಜ್ ಅರಸ್‌ರವರು ರಾಜ್ಯದ ಮುಖ್ಯಮಂತ್ರಿಗಳಾಗಿದ್ದರು. ನನಗೆ ಲೆಫ್ಟಿನೆಂಟ್ ಗವರ್ನರ್ ಮಾಡಿದ್ದಾರೆ ಎನ್ನುವ ನೋವು ಅವರ ಮನಸ್ಸಿನಲ್ಲಿ ಬಹಳ ಇತ್ತು. ನಾನು ಪಾಂಡಿಚೆರಿಗೆ ಭೇಟಿ ನೀಡಿದಾಗ ಅರಿವಿಲ್ಲೋಗೆ ಭೇಟಿ ಕೊಟ್ಟಿದ್ದೆ, ಆಗ ಅಮ್ಮನವರು ಬದುಕಿದ್ದರು, ಮದರ್ ಎಂದು ನಾವು ಏನು ಹೇಳುತ್ತೇವೆ ಅವರು ಆ ಸಂದರ್ಭದಲ್ಲಿ ಬದುಕಿದ್ದರು. ನಾನು ಒಬ್ಬ ವಿದ್ಯಾರ್ಥಿ ನಾಯಕನಾಗಿ ಕನ್ನಡಿಗನಾಗಿ ಲೆಫ್ಟಿನೆಂಟ್ ಗವರ್ನರ್ ರವರನ್ನು ಭೇಟಿ ಮಾಡಬೇಕೆಂದು ಹೇಳಿದಾಗ, ಅವರನ್ನು ಭೇಟಿ

ಮಾಡಿದ ಸಂದರ್ಭದಲ್ಲಿ ಅವರು ಆಗಲೇ ನನಗೆ ಆರ್ಶೀವಾದ ಮಾಡಿದ್ದರು. ಸಿಂಧ್ಯರವರೇ, ನೀವು ನಾಯಕರಾಗುವ ಸೂಚನೆಗಳು ನಿಮ್ಮಲ್ಲಿ ಇದೆ. ನೀವು ಇನ್ನೂ ಬೆಳೆಯಬೇಕು, ಒಳ್ಳೆಯ ಮಾರ್ಗದಲ್ಲಿ ಹೋಗಬೇಕೆಂದು ಬುದ್ಧಿವಾದ ಹೇಳಿದ್ದರು. ಅದಾದ ನಂತರ ಮೂರು ವರ್ಷಗಳ ಹಿಂದಿನ ಮಾತು ಅವರು 1977ರಲ್ಲಿ ಹಂಗಾಮಿ ರಾಷ್ಟ್ರಪತಿಯವರಾಗಿದ್ದಂಥ ಸಂದರ್ಭದಲ್ಲಿ ಜನತಾ ಪಕ್ಷದ ಮಾನ್ಯ ಮುರಾರ್ಜಿದೇಸಾಯಿ ಯವರ ನೇತೃತ್ವದ ಕೇಂದ್ರ ಸರ್ಕಾರದ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಈ ಪ್ರಸ್ತಾಪ ಮಾಡಿದರು. ಆರು ವಿಧಾನ ಸಭೆಗಳನ್ನು ನಾವು ವಿಸರ್ಜನೆ ಮಾಡುವ ಕೇಂದ್ರ ಸರ್ಕಾರದ ಸಚಿವ ಸಂಪುಟದ ತೀರ್ಪಿಗೆ ತಾವು ಸಹಿ ಹಾಕಬೇಕೆಂದು ಹೇಳಿದ್ದಕ್ಕೆ ಅವರು ಒಲ್ಲೆ ಎಂದು ಹೇಳಿದರು. ಅಲ್ಲಿದ್ದಂತಹ ಜನತಾ ಪಕ್ಷದ ಕಛೇರಿಯಿಂದ ಲೋಕಸಭಾ ಸದಸ್ಯರು, ನಾವೆಲ್ಲಾ ಬಹಳ ದೊಡ್ಡ ಪ್ರತಿಭಟನೆಯನ್ನು ಮಾಡಿದೆವು. ಆದಾದ ಮಾರನೆ ದಿನ ನಾನು ಅವರಿಗೆ ಭೇಟಿ ಮಾಡಿದೆ, ಕೊನೆಗೆ ಸಹಿ ಹಾಕಿದರು. ಅವರು ಸಹಿ ಹಾಕದೇ ಹೋಗಿದ್ದರೆ, ಈ ರಾಷ್ಟ್ರದ ಪ್ರಜಾತಂತ್ರದ ವ್ಯವಸ್ಥೆಗೆ ಒಂದು ರೀತಿಯ ವಿವಾದ ಪ್ರಾರಂಭವಾಗುತ್ತಿತ್ತು. ಅವರಿಗೆ ಮನಸ್ಸು ಇಲ್ಲದಿದ್ದರೂ ಸಹ ಆ ವಿವಾದಕ್ಕೆ ಆಸ್ಪದ ಮಾಡಿ ಕೊಡುವುದಕ್ಕೆ ಹೋಗಲಿಲ್ಲ. ಈ ಎರಡು ಘಟನೆಗಳನ್ನು ಅವರು ಜ್ಞಾಪಕ ಮಾಡಿಕೊಂಡರು. ಮಾನ್ಯ ಜತ್ತಿಯವರು ಈ ರಾಜ್ಯದ ಒಬ್ಬ ಶ್ರೇಷ್ಠ ರಾಜಕಾರಣಿಗಳಾಗಿ ಅವರ ವೈಯಕ್ತಿಕ ಜೀವನದಲ್ಲಿ ಬಹಳ ಪ್ರಾಮಾಣಿಕವಾಗಿ ಕನ್ನಡ ನಾಡಿನ ಕೀರ್ತಿಯನ್ನು ರಾಷ್ಟ್ರ ವ್ಯಾಪ್ತಿಗೆ ತೆಗೆದುಕೊಂಡು ಹೋದ ಮಹಾನ್ ನಾಯಕರು. ಅವರು ಹೇಳಿ ಹೋದ ಬಸವ ತತ್ವಗಳ ಅನುಕರಣೆ ಮಾಡುವ ಕೆಲಸವನ್ನು ನಾವೆಲ್ಲರೂ ಜಾತ್ಯಾತೀತ ಮನೋಭಾವದಿಂದ ಮಾಡಿದರೆ ಮಾತ್ರ ಅವರ ಆತ್ಮಕ್ಕೆ ಶಾಂತಿಯುತ ಸಹಿತ ಸಿಗುತ್ತದೆ ಎಂದು ನಾನು ಭಾವಿಸಿಕೊಂಡಿದ್ದೇನೆ. ಅವರ ಬಸವಕಲ್ಯಾಣದ ಅಭಿವೃದ್ಧಿಗೋಸ್ಕರ ಹಾಕಿಕೊಂಡಿರತಕ್ಕಂತಹ ಯೋಜನೆಗಳ ಬಗ್ಗೆ ಸರ್ಕಾರ ಹೆಚ್ಚಿನ ಒತ್ತನ್ನು ಕೊಡುತ್ತದೆ ಎಂದು ನಾನು ಭಾವಿಸಿಕೊಂಡಿದ್ದೇನೆ. ಅದರ ಜೊತೆಗೆ ಬಸವ ಪ್ರಶಸ್ತಿಯನ್ನು ಕೊಡತಕ್ಕಂತಹ ವಿಚಾರದಲ್ಲಿ ಕೀರ್ತಿ ಶ್ರೇಷ್ಠರಾದ ಮಾನ್ಯ ಜೆ.ಹೆಚ್. ಪಟೇಲರು ಮುಖ್ಯ ಮಂತ್ರಿಗಳಾಗಿದಂತಹ ಸಂದರ್ಭದಲ್ಲಿ ಸಹಿತ ಬಸವ ತತ್ವಗಳು ಕೇವಲ ಭಾರತ ದೇಶಕ್ಕೆ, ಕರ್ನಾಟಕಕ್ಕೆ, ಒಂದು ಜಾತಿಗೆ ಒಂದು ಧರ್ಮಕ್ಕೆ ಒಂದು ಜಾತಿಗೆ, ಅಥವಾ ಒಂದು ಗುಂಪಿಗೆ ಸೀಮಿತವಾಗಿ ಮಾಡುವ ವಿಚಾರ ಅಲ್ಲ. ಇದು ಸರ್ವ ಶ್ರೇಷ್ಠವಾದ ಮಾನವ ಧರ್ಮದ ವಿಚಾರದ ತಿರುಳು. ಇದು ಇಡೀ ಜಗತ್ತಿಗೆ ಗೊತ್ತಾಗಬೇಕೆಂದು ಶ್ರೀಮಾನ್ ನೆಲ್ಸನ್ ಮಂಡೇಲಾರವರಂತಹ ಮುಖಂಡರಿಗೆ ಈ ಪ್ರಶಸ್ತಿಯನ್ನು ಕೊಡುವುದರ ಮೂಲಕ ಈ ಬಸವ ತತ್ವದ ವಿಚಾರಗಳನ್ನು ಇಡೀ ಪ್ರಪಂಚದಾದ್ಯಂತ ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂಬ ವಿಚಾರವನ್ನು ಪ್ರಸ್ತಾಪ ಮಾಡಿದರು. ಅಂತಹ ಕಾರ್ಯಕ್ರಮಗಳ ಬಗ್ಗೆ ನಮ್ಮ ಸರ್ಕಾರ, ಮಾನ್ಯ ಮುಖ್ಯಮಂತ್ರಿಗಳು ವಿಚಾರ ಮಾಡಬೇಕೆಂದು ಈ ಸಂದರ್ಭದಲ್ಲಿ ನಾನು ಹೇಳ ಬಯಸುತ್ತೇನೆ.

ಮಾನ್ಯ ಸೂರಿಯವರು ನಿಜವಾಗಿ ನಮ್ಮಂತಹ ರಾಜಕಾರಣಿಗಳಿಗೆ ಆದರ್ಶ ಪುರುಷರಾಗಿದ್ದರು. ವಿಧಾನಸಭೆಯಲ್ಲಿ ಕೆಲವೇ ವರ್ಷಗಳ ಕಾಲ ಮಾನ್ಯ ಚಂದ್ರೇಗೌಡರು ಅಧ್ಯಕ್ಷರಾಗಿದ್ದ ಕಾಲದಲ್ಲಿ ವರ್ತೂರು ಕ್ಷೇತ್ರದಿಂದ ಅವರು ಆಯ್ಕೆಯಾಗಿ ಸುಮಾರು 19 ರಿಂದ 20 ತಿಂಗಳ ಕಾಲ ಶಾಸಕರಾಗಿದ್ದರು. ಬಹಳಷ್ಟು ಜನ ಶಾಸಕರನ್ನು, ಮಂತ್ರಿಗಳನ್ನು,

ಮುಖ್ಯಮಂತ್ರಿಗಳನ್ನು, ಹೋರಾಟಗಾರರನ್ನು ಕರ್ನಾಟಕ ಕಂಡಿದೆ. ಆದರೆ ಸೂರಿಯವರನ್ನು ಬಹಳಷ್ಟು ವರ್ಷಗಳ ಕಾಲ ನಾವು ಮರೆಯುವುದಕ್ಕೆ ಸಾಧ್ಯವಿಲ್ಲ. ಕಾರಣ ಕಳೆದ 50 ವರ್ಷಗಳ ಕಾಲದಲ್ಲಿ ಕಮ್ಯುನಿಸ್ಟ್ ಪಕ್ಷದ ಬಹಳಷ್ಟು ಜನರು ಸ್ವಾತಂತ್ರ್ಯ ಹೋರಾಟಗಾರರ ಚಳುವಳಿಯಲ್ಲಿ ಭಾಗವಹಿಸಿಲ್ಲ ಎಂದು ನಾವು ಕೇಳಿದ್ದೇವೆ. ಆದರೆ ಸೂರಿಯವರು ಅದಕ್ಕೆ ಹೊರತಾಗಿದ್ದವರು. ಈ ದೇಶದ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗಿಯಾದವರು. ನಮ್ಮ ನಾಯಕರಾಗಿದ್ದ ಮಾನ್ಯ ಜೆ.ಹೆಚ್. ಪಟೇಲರು, ಅವರ ಜೊತೆಯಲ್ಲಿ ಮೈಸೂರು ಮಹಾರಾಜರ ವಿರುದ್ಧವಾಗಿ ಪ್ರತಿಭಟನೆ ಮಾಡಿದವರು. ಬೆಂಗಳೂರಿನ ಪ್ರತಿಯೊಂದು ಮನೆಗೂ ಸಹಿತ ಮಾನ್ಯ ಸೂರಿಯವರು ಪರಿಚಿತರಾದವರು. ಒಬ್ಬ ಮಹಾನ್ ವ್ಯಕ್ತಿಯಾಗಿದ್ದರು. ಇಡೀ ಪ್ರಪಂಚದಲ್ಲಿ ನಾವು ಆರ್ಥಿಕ ಬದಲಾವಣೆ ನೋಡುತ್ತಿದ್ದೇವೆ. ಖಾಸಗೀಕರಣದ ಗುಂಗಿನಲ್ಲಿ ನಾವೆಲ್ಲರೂ ಇದ್ದೇವೆ. ಕಾರ್ಮಿಕರು ಉದ್ಯೋಗ ಕಳೆದುಕೊಳ್ಳುತ್ತಿದ್ದಾರೆ. ಅವರು ಪ್ರತಿ ದಿನ ಬಡವರಾಗುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ಬೆವರನ್ನು ಸುರಿಸಿ ದುಡಿಯತಕ್ಕಂತಹ ಜನಗಳ ಪರವಾಗಿ ಧ್ವನಿ ಎತ್ತತಕ್ಕಂತಹ ಒಬ್ಬ ವ್ಯಕ್ತಿಯ ಅವಶ್ಯಕತೆ ಈ ಸದನದಲ್ಲಿದೆ ಎನ್ನುವುದನ್ನು ಸಹ ನಾವು ಕಂಡಿದ್ದೇವೆ. ಮಾನ್ಯ ಪಂಥೀಪತಿಯವರು, ಮಾನ್ಯ ಎಮ್.ಎಸ್. ಕೃಷ್ಣನ್‌ರವರು, ಮಾನ್ಯ ಸೂರ್ಯನಾರಾಯಣರಾವ್ ರವರು, ಮೈಕೆಲ್ ಫರ್ನಾಂಡಿಸ್ ರವರು, 1983 ರಲ್ಲಿ ಈ ಸದನದಲ್ಲಿದ್ದರು. ಕಾರ್ಮಿಕರಿಗೆ ಏನಾದರೂ ತೊಂದರೆಯಾಗುತ್ತಿದೆ ಎಂದರೆ, ಅದು ಸರಿಯೋ ತಪ್ಪೋ ಅದರ ಪರವಾಗಿ ಧ್ವನಿ ಎತ್ತತಕ್ಕಂತಹ ಕೆಲಸವನ್ನು ಮಾನ್ಯ ಸೂರ್ಯನಾರಾಯಣ ರಾವ್ ರವರು ಮಾಡಿದರು. ತಾತ್ವಿಕವಾಗಿ ಅನೇಕ ವಿಚಾರಗಳಲ್ಲಿ ಅನೇಕ ದೃಷ್ಟಿಕೋನಗಳನ್ನು ನಾವೆಲ್ಲಾ ಇಟ್ಟುಕೊಂಡಿರುತ್ತೇವೆ. ಮಾನ್ಯ ಸೂರ್ಯನಾರಾಯಣರಾವ್ ರವರು ಸಾಯುವುದಕ್ಕೆ ಎರಡು ದಿನಗಳ ಮುಂಚೆ ನಮ್ಮ ಪಕ್ಷದವರೇ ಆದ ಮಾನ್ಯ ಭೈರೇಗೌಡರನ್ನು ಹಾಗೂ ನಮ್ಮ ಜೊತೆಗೆ ಕೂಡ ಸಂಪರ್ಕಿಸಿ ಶ್ರೀಮತಿ ಲಕ್ಷ್ಮೀ ಸೆಹಗಲ್ ರವರು ಬೆಂಗಳೂರಿಗೆ ಬರುತ್ತಿದ್ದಾರೆ. ಇವರನ್ನು ನಾವು ಎಡ ಪಂಥೀಯ ಪಕ್ಷದ ಅಭ್ಯರ್ಥಿಯನ್ನಾಗಿ ರಾಷ್ಟ್ರಪತಿ ಚುನಾವಣೆಗೆ ನಿಲ್ಲಿಸಿದ್ದೇವೆ, ನೀವೆಲ್ಲರೂ ನಮಗೆ ಸಹಕಾರ ಕೊಡಬೇಕು ಎಂದು ಕೇಳಿಕೊಂಡಿದುದರ ಜೊತೆಗೆ ವಿಶೇಷವಾಗಿ ಅನೇಕ ಕಾರ್ಯಕ್ರಮಗಳನ್ನು ಕಾರ್ಮಿಕರ ಸಲುವಾಗಿ ಹಾಕಿಕೊಳ್ಳಬೇಕು, ಈ ನಿಟ್ಟಿನಲ್ಲಿ ವಿಧಾನಸಭೆಯಲ್ಲಿ ಕಾರ್ಮಿಕರ ಸಲುವಾಗಿ ಹೆಚ್ಚು ಒತ್ತವನ್ನು ಕೊಟ್ಟು ಚರ್ಚೆಯನ್ನು ಮಾಡಬೇಕು ಎಂದು ಅವರು ನಮ್ಮ ಜೊತೆ ಪ್ರಸ್ತಾಪವನ್ನು ಮಾಡಿದ್ದರು. ಬಹುಶಃ ಅವರು ತಮ್ಮ ಆರೋಗ್ಯದ ಬಗ್ಗೆ ಲೆಕ್ಕಿಸದೇ ಇದ್ದುದ್ದೇ ಅವರ ಸಾವಿಗೆ ಕಾರಣ ಎಂದು ನಾನಾದರೂ ತಿಳಿದುಕೊಂಡಿದ್ದೇನೆ. ಹಗಲು ರಾತ್ರಿ ಕರ್ನಾಟಕದ ಉದ್ದಗಲಕ್ಕೂ ಅವಿಶ್ರಾಂತವಾಗಿ ದುಡಿದಂಥ ಮಹಾನ್ ನಾಯಕರು ಸನ್ಮಾನ್ಯ ಸೂರ್ಯನಾರಾಯಣರಾವ್ ರವರು. ಯಾವುದೇ ಫಲವನ್ನು ಅಪೇಕ್ಷೆ ಮಾಡದೇ ರಾಜಕೀಯ ಸ್ಥಾನಮಾನಗಳನ್ನು ಇಟ್ಟುಕೊಳ್ಳದೇ, ಇಡೀ ಪ್ರಪಂಚದಲ್ಲಿ ಕಮ್ಯುನಿಸ್ಟ್ ತತ್ವ ತನ್ನ ಅಸ್ತಿತ್ವವನ್ನು ಕಳೆದುಕೊಂಡಿರುವಂಥ ಸಂದರ್ಭದಲ್ಲಿಯೂ ಕೂಡ ಆ ಒಂದು ವೈಚಾರಿಕವಾದ ಕಮ್ಯುನಿಸ್ಟ್ ವಿಚಾರಗಳ ಬಗ್ಗೆ ನಂಬಿಕೆಯನ್ನು ಇಟ್ಟುಕೊಂಡು ಹೋರಾಟ ಮಾಡಿದಂಥ ಮಹಾನ್ ಮುಖಂಡರುಗಳಲ್ಲಿ ಮಾನ್ಯ ಸೂರ್ಯನಾರಾಯಣ್ ರವರೂ ಕೂಡ ಒಬ್ಬರಾಗಿದ್ದಾರೆ. ಅವರ ನೆನಪು, ಅವರ ಹೋರಾಟದ ನೆನಪು ಕರ್ನಾಟಕದ ಕಾರ್ಮಿಕರ ಚರಿತ್ರೆಯಲ್ಲಿ ಬಹಳ ದಿನಗಳ ಕಾಲ ಇರುತ್ತದೆ ಎಂದು ನಾನು ತಿಳಿದುಕೊಂಡಿದ್ದೇನೆ. ಸರ್ಕಾರ ಮತ್ತು ನಾವು ದುಡಿಯುತ್ತಿರುವ ವರ್ಗದ ಪರವಾಗಿ ಯೋ[illegible]

ದುಡಿಯುತ್ತಿರುವ ವರ್ಗದವರ ರಕ್ಷಣೆಯನ್ನು ಇವೊತ್ತಿನ ಜಾಗತೀಕರಣದ ಹಿನ್ನೆಲೆಯಲ್ಲಿ ಮಾಡತಕ್ಕಂಥದ್ದೇ ದಿವಂಗತರ ಆತ್ಮಕ್ಕೆ ಸಲ್ಲಿಸತಕ್ಕಂಥ ಶಾಂತಿ ಎಂದು ಹೇಳಿ ನಾನಾದರೂ ಭಾವಿಸಿಕೊಂಡು, ಇವೊತ್ತು ಮಾನ್ಯ ಸೂರ್ಯನಾರಾಯಣ ರಾವ್ ರವರು, ಮಾನ್ಯ ಬಸಪ್ಪ ದಾನಪ್ಪ ಜತ್ತಿಯವರುಗಳ ನಿಧನದ ಜೊತೆಗೆ ಮಾನ್ಯ ದತ್ತಾತ್ರೇಯ ವೈಂಗಣಕರ್, ಮಾನ್ಯ ಬಿ. ಪುಟ್ಟಣ್ಣನವರು, ಮಾನ್ಯ ಎಸ್.ಎಲ್. ಶೇಕ್ಧರ್‌ರವರುಗಳ ನಿಧನದ ಬಗ್ಗೆ ತಾವೇನು ಸಂತಾಪ ಸೂಚಕ ನಿರ್ಣಯದಲ್ಲಿ ವಿಚಾರಗಳನ್ನು ಮಂಡಿಸಿದ್ದೀರಿ ಅದಕ್ಕೆ ನಾನು ಸಮ್ಮತಿಯನ್ನು ವ್ಯಕ್ತ ಮಾಡಿ ನಮ್ಮ ಪಕ್ಷದ ಪರವಾಗಿ ಹಾಗೂ ನಮ್ಮ ಪಕ್ಷದ ಶಾಸಕ ಮಿತ್ರರುಗಳ ಪರವಾಗಿ ದಿವಂಗತರುಗಳ ಆತ್ಮಕ್ಕೆ ಶಾಂತಿಯನ್ನು ಕೋರುತ್ತೇನೆ. ಇದರ ಜೊತೆಗೆ ಅವರ ಆದರ್ಶಗಳನ್ನು ನಾವೆಲ್ಲರೂ ಪರಿಪಾಲನೆ ಮಾಡುವುದಕ್ಕೆ ಪ್ರಯತ್ನ ಮಾಡೋಣವೆಂದು ಹೇಳುತ್ತಾ, ದಿವಂಗತರುಗಳ ಕುಟುಂಬ ವರ್ಗದವರಿಗೆ ಇವೊತ್ತು ನಾವು ಸಾಂತ್ವನ ಹೇಳಬೇಕಾದ ಅವಶ್ಯಕತೆ ಇದೆ. ಎಲ್ಲಾ ಕುಟುಂಬ ವರ್ಗದವರಿಗೆ ದಿವಂಗತರ ಅಗಲಿಕೆಯಿಂದ ಉಂಟಾಗಿರುವ ದುಃಖವನ್ನು ಭರಿಸುವ ಶಕ್ತಿಯನ್ನು ಭಗವಂತನು ನೀಡಲಿ ಎಂದು ನಾನು ಪ್ರಾರ್ಥನೆ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಆರ್.ಬಿ. ತಿಮ್ಮಾಪ್ಪುರ (ಯೋಜನೆ, ಸಾಂಖ್ಯಿಕ ಹಣಕಾಸು ಮತ್ತು ಅಂಕಿ ಅಂಶ ಇಲಾಖಾ ಸಚಿವರು).- ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಬಿ.ಡಿ. ಜತ್ತಿಯವರು ತಮ್ಮ ಸಾಮಾಜಿಕ ಮೌಲ್ಯಗಳನ್ನು ಬಿಟ್ಟು ಹೋಗಿದ್ದಾರೆ. ಅವರು ಒಂದು ಅರ್ಥದಲ್ಲಿ, ಸಾಮಾಜಿಕ ಜೀವನದಲ್ಲಿ ಮೌಲ್ಯಗಳು ಕುಸಿದಿರುವ ಇಂದಿನ ದಿನಗಳಲ್ಲಿ ಮಾನ್ಯ ಬಿ.ಡಿ. ಜತ್ತಿಯವರು ಒಂದು ಬೆಳ್ಳಿಯ ಗೆರೆ ಅಥವಾ ಬೆಳ್ಳಿಯ ಚುಕ್ಕೆ ಎಂದರೆ ತಪ್ಪಾಗಲಾರದು. ಮಾತು ಬೆಳ್ಳಿ, ಮೌನ ಬಂಗಾರ, ಎನ್ನತಕ್ಕದ್ದನ್ನು ಅವರ ಮಾತಿನ ಅನುಭವದಲ್ಲಿ ನಾನು ಇಲ್ಲಿ ಹೇಳಬೇಕಾಗುತ್ತದೆ. ಅವರ ಹುಟ್ಟು ಒಂದು ಸಣ್ಣ ಹಳ್ಳಿಯಲ್ಲಿ ಆಗಿ ತದನಂತರ ಅವರು ಹಳ್ಳಿಯಿಂದ ದಿಲ್ಲಿಯವರೆಗೆ ಹೋಗಲು ಅವರು ಜೀವನದಲ್ಲಿ ನಡೆದು ಬಂದ ದಾರಿ ಅಷ್ಟೇನೂ ಸಮರ್ಪಕವಾಗಿರಲಿಲ್ಲ ಎನ್ನತಕ್ಕಂಥ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಅವರು ಐದನೇ ತರಗತಿಯಲ್ಲಿ ಓದುತ್ತಿರುವಾಗ ಬಾಲ್ಯ ವಿವಾಹ ಮಾಡಿಕೊಂಡರು, ಸಣ್ಣ ವಯಸ್ಸಿನಲ್ಲಿಯೇ ತಮ್ಮ ತಂದೆಯನ್ನು ಕಳೆದುಕೊಂಡು ತದನಂತರ ಅವರು ವ್ಯಾಸಂಗ ಮಾಡಿದ ರೀತಿ, ಅವರ ಜೀವನ ಶೈಲಿಯನ್ನು ಮೆಚ್ಚತಕ್ಕಂಥದ್ದಾಗಿದೆ ಎಂದು ಹೇಳಬಯಸುತ್ತೇನೆ. ಅವರು ಸ್ವಾತಂತ್ರ್ಯ ಸಂಗ್ರಾಮದಲ್ಲಿ ತಮ್ಮನ್ನು ತಾವೇ ತೊಡಗಿಸಿಕೊಂಡವರಾಗಿದ್ದರು. ಸಾವಳಗಿಯ ಸರಪಂಚನಾಗಿ, ನಗರಸಭೆಯ ಅಧ್ಯಕ್ಷರಾಗಿ, ಜಮಖಂಡಿ ಸಂಸ್ಥಾನದ ಮುಖ್ಯಮಂತ್ರಿಯಾಗಿ ಅವರು ಕೆಲಸ ಮಾಡಿದ ರೀತಿ ಬಹಳ ಅದ್ಭುತವಾಗಿದೆ ಎಂದು ನಾನಾದರೂ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಬಸವ ತತ್ವದ ಆಚರಣೆಯ ಜೊತೆಗೆ ತಮ್ಮ ಜೀವನದಲ್ಲಿ ಅದನ್ನು ಅಳವಡಿಸಿಕೊಂಡಿದ್ದಂಥ ಆ ಮಹಾನ್ ವ್ಯಕ್ತಿ ಅವೊತ್ತು ಜಾತಿಯ ವಿರುದ್ಧ ಅವರು ಮುಖ್ಯಮಂತ್ರಿಗಳಾದಾಗ ಇಬ್ಬರು ಸಚಿವರನ್ನು ತೆಗೆದುಕೊಳ್ಳಬೇಕು ಎಂದು ಅವಕಾಶ ಇದ್ದಾಗ ಅವರಲ್ಲಿ ಒಬ್ಬರನ್ನು ಹಿಂದುಳಿದ ಜನಾಂಗದ ಕಾಂಬ್ಳಿ ಎನ್ನುವವರನ್ನು ಹಾಗೂ ಇನ್ನೊಬ್ಬರನ್ನು ಬ್ರಾಹ್ಮಣ ಜನಾಂಗದ ಮುಂದುವರಿದವರಾದ ಹೊರ್ತಿ ಎನ್ನುವವರನ್ನು ತೆಗೆದುಕೊಂಡಿರುವ ವಿಷಯ ಮಾನ್ಯ ಜತ್ತಿಯವರು ಸಂಸ್ಥಾನದ ಮುಖ್ಯಮಂತ್ರಿಗಳಾಗಿದ್ದಾಗ ನಡೆದ ಘಟನೆಗಳನ್ನು ಅವಲೋಕಿಸಿದರೆ ನಮಗೆ

ತಿಳಿದುಬರುತ್ತದೆ ಎಂಬುದನ್ನು ನಾನು ಇಲ್ಲಿ ಹೇಳ ಬಯಸುತ್ತೇನೆ. ಇನ್ನು ಅವರು ಕನ್ನಡದ ಬಗ್ಗೆ ಹೋರಾಟ ಮಾಡಿದ್ದು, ಏಕೀಕೃತ ಕರ್ನಾಟಕದ ಬಗ್ಗೆ ಎಲ್ಲಾ ಸಂಸ್ಥಾನಗಳನ್ನು ಒಗ್ಗೂಡಿಸುವಲ್ಲಿ ಅವರ ಪಾತ್ರ ಮುಖ್ಯಮಂತ್ರಿಗಳಾಗಿದ್ದಾಗ ಹಿರಿಮೆ ತರುವಂಥದ್ದೇ ಎನ್ನುವುದನ್ನು ಹೇಳಿ, ಉಪ ರಾಷ್ಟ್ರಪತಿಯಾಗಿ, ರಾಷ್ಟ್ರಪತಿಯಾಗಿ, ಈ ದೇಶದ ಅತ್ಯುನ್ನತ ಸ್ಥಾನವನ್ನು ಗಳಿಸಿ ಹಳ್ಳಿಯಿಂದ ದಿಲ್ಲಿಯವರೆಗೆ ಈ ಹಳ್ಳಿ ಹೈದ ಹೋದ ರೀತಿ ಬಹಳ ಆಶ್ಚರ್ಯಕರ ರೀತಿಯಲ್ಲಿ ಇಂದಿನ ಯುವಕರಿಗೆ ಹಾಗೂ ರಾಜಕಾರಣಿಗಳಿಗೆ ಮಾರ್ಗದರ್ಶಕರಾಗಿದ್ದಾರೆ ಎನ್ನುವ ಮಾತನ್ನು ಹೇಳಬಯಸುತ್ತೇನೆ. ಇನ್ನು ದಿವಂಗತರುಗಳಾದ ಶ್ರೀ ದತ್ತಾತ್ರೇಯ ವೈಂಗಣಕರ್ ಶ್ರೀ ಬಿ. ಪುಟ್ಟಣ್ಣನವರು, ಶ್ರೀ ಸೂರ್ಯನಾರಾಯಣರಾವ್ ರವರು, ಹಾಗೂ ಶ್ರೀ ಶೆಕ್ದರ್‌ರವರುಗಳ ಆತ್ಮಕ್ಕೆ ಶಾಂತಿ ದೊರೆಯಲಿ ಎಂದು ಹೇಳಿ ತಾವೇನು ಇಲ್ಲಿ ಮಂಡಿಸಿರುವ ಸಂತಾಪ ಸೂಚನಾ ನಿರ್ಣಯದ ಬಗ್ಗೆ ಮಾತನಾಡಲು ನನಗೆ ಅವಕಾಶ ಕೊಟ್ಟಿರಿ, ಅದಕ್ಕಾಗಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ಶ್ರೀ ಸಿ. ಭೈರೇಗೌಡ (ವೇಮಗಲ್).- ಮಾನ್ಯ ಅಧ್ಯಕ್ಷರೆ, ಇವೊತ್ತು ತಾವೇನು ಸಂತಾಪ ಸೂಚನಾ ನಿರ್ಣಯವನ್ನು ಮಂಡಿಸಿದ್ದೀರಿ ಅದಕ್ಕೆ ನನ್ನ ಪೂರ್ಣವಾದ ಸಹಮತವನ್ನು ವ್ಯಕ್ತಮಾಡುತ್ತಾ, ಇಬ್ಬರ ವಿಚಾರದಲ್ಲಿ ವಿಶಿಷ್ಟವಾಗಿರುವಂಥದ್ದನ್ನು ಮಾತ್ರ ಹೇಳಬಯಸುತ್ತೇನೆ. ಮಾನ್ಯ ಬಿ.ಡಿ. ಜತ್ತಿಯವರ ಬಗ್ಗೆ ಈಗಾಗಲೇ ಕೆಲವು ಮಾನ್ಯ ಸದಸ್ಯರು ಹಾಗೂ ಮಾನ್ಯ ಮುಖ್ಯಮಂತ್ರಿಗಳು ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಆದರೆ ಅವರನ್ನು ನಾವು ವಿಶೇಷವಾಗಿ ನೆನೆದುಕೊಳ್ಳಬೇಕಾಗಿರುವುದು ಎಂದರೆ ಬೇರೆ ಬೇರೆ ರಂಗಗಳಲ್ಲಿ ಅವರು ಮಾಡಿರುವ ಕೆಲಸಗಳೆಲ್ಲದರ ಜೊತೆಗೆ ತಿಲಕ ಪ್ರಾಯವಾಗಿರತಕ್ಕಂಥ ಕೆಲಸ ಯಾವುದು ಎಂದರೆ ಈ ರಾಜ್ಯದಲ್ಲಿ ಅನೇಕ ರೀತಿಯ ಭೂ ಸಂಬಂಧಗಳು ಇತ್ತು, ತಲತಲಾಂತರಗಳಿಂದ ಭೂಮಿಯನ್ನು ಗೇಣಿದಾರರಾಗಿ ಅವರುಗಳು ಮತ್ತು ಮಕ್ಕಳು, ಮೊಮ್ಮಕ್ಕಳೆಲ್ಲರೂ ಕೂಡ ಭೂಮಿಯಲ್ಲಿ ದುಡಿದರೂ ಕೂಡ ಅದೇ ಪರಿಸ್ಥಿತಿಯಲ್ಲಿಯೇ ಅವರುಗಳು ಇರಬೇಕಾದ ಪರಿಸ್ಥಿತಿ ನಮ್ಮ ರಾಜ್ಯದಲ್ಲಿ ಇತ್ತು. ಇದರ ಜೊತೆಯಲ್ಲಿಯೇ ಸಾವಿರಾರು ಎಕರೆಗಳಷ್ಟು ಭೂಮಿ ಕೆಲವೇ ಕೆಲವು ಕುಟುಂಬದವರ ವಶದಲ್ಲಿದ್ದ ಪರಿಸ್ಥಿತಿ ಕೂಡ ಅಂದು ಇತ್ತು. ಇವೆಲ್ಲವನ್ನೂ ಗಮನಿಸಿ ಮಾನ್ಯ ಜತ್ತಿಯವರು ಮತ್ತು ಡಾ|| ನಾಗನಗೌಡರು ಈ ಬಗ್ಗೆ ಚಿಂತನೆಯನ್ನು ಮಾಡಿ ಭೂ ಸಂಬಂಧಗಳನ್ನು ಸರಳೀಕರಣಗೊಳಿಸಬೇಕಾದ ಅವಶ್ಯಕತೆ ಇದೆಯೆಂದು ಹೇಳಿ ರೈತರ ಶೋಷಣೆಯನ್ನು ಕಡೆಗಾಣಿಸಬೇಕು ಎಂಬ ಬಗ್ಗೆ ಪ್ರಯತ್ನವನ್ನು ನಡೆಸಿ ನಾಗನಗೌಡರ ಸಮಿತಿ ನೀಡಿರತಕ್ಕಂಥ ವರದಿ ಮತ್ತು ಜತ್ತಿಯವರು ನೀಡಿರತಕ್ಕಂಥ ವರದಿ ಆಧಾರದ ಮೇಲೆ ಇವೊತ್ತು ಭೂ ಸುಧಾರಣಾ ಮಸೂದೆ ಕರ್ನಾಟಕ ರಾಜ್ಯದಲ್ಲಿ ಬಂದಿದೆ. ಆದರಿಂದ ಗೇಣಿದಾರರಿಗೆ ಮತ್ತು ಭೂಮಿ ಇಲ್ಲದೇ ಇರುವವರಿಗೆ ಕೂಡ ಅಲ್ಪಸ್ವಲ್ಪ ಭೂಮಿ ದೊರೆತಿದೆ ಎಂದು ಹೇಳಿದರೆ ಈ ಸಂದರ್ಭದಲ್ಲಿ ಇದಕ್ಕೆ ಕಾರಣಕರ್ತರಾದ ಮಾನ್ಯ ಜತ್ತಿಯವರನ್ನು ಹಾಗೂ ಮಾನ್ಯ ನಾಗನಗೌಡರನ್ನು ನೆನಸಿಕೊಳ್ಳಬೇಕು ಎಂದು ನಾನಾದರೂ ಹೇಳ ಬಯಸುತ್ತೇನೆ. ಕಾರಣವೇನು ಎಂದರೆ, ಈಗ ಏನು ಸಾಮಾಜಿಕ ಚಿಂತನೆ ಬಗ್ಗೆ ಪ್ರಚಲಿತವಿದೆಯೋ ಅಂಥ ವಾತಾವರಣ ಇಲ್ಲದೇ ಇದ್ದಂಥ ಆಗಿನ ದಿನಗಳಲ್ಲಿಯೂ ಮಾನ್ಯ ಜತ್ತಿಯವರು ಆ ರೀತಿಯಾಗಿ ಆಲೋಚನೆಯನ್ನು ಮಾಡಿ ಭೂ ಸುಧಾರಣಾ ಮಸೂದೆಯನ್ನು

ಜಾರಿಗೆ ತರುವುದಕ್ಕೆ ಇಡೀ ದೇಶದಲ್ಲಿಯೇ ಒಂದು ಮಾದರಿಯಾದ ಭೂ ಸುಧಾರಣಾ ಕಾಯ್ದೆ ಈ ರಾಜ್ಯದಲ್ಲಿ ಜಾರಿಗೆ ಬರುವುದಕ್ಕೆ ಕಾರಣಕರ್ತರು ಮಾನ್ಯ ಜತ್ತಿಯವರು ಎಂದು ಈ ಸಂದರ್ಭದಲ್ಲಿ ಜ್ಞಾಪಿಸುವುದಕ್ಕೆ ನಾನು ಇಚ್ಛೆ ಪಡುತ್ತೇನೆ.

ಇನ್ನು ಮಾನ್ಯ ಸೂರ್ಯನಾರಾಯಣರಾವ್ ರವರು ಜೊತೆಯಲ್ಲಿ ಸುಮಾರು 15-20 ವರ್ಷಗಳ ಕಾಲ ಕೆಲಸ ಮಾಡುವ ಅವಕಾಶ ನನಗೆ ದೊರೆತಿತ್ತು. ಅವರು ಕಾರ್ಮಿಕ ವರ್ಗವನ್ನು ಪ್ರತಿನಿಧಿಸಿ ಕೆಲಸ ಮಾಡುತ್ತಿದ್ದರೆ ನಾನು ರೈತರ ಪ್ರತಿನಿಧಿಯಾಗಿ ರೈತರ ಪರವಾಗಿ ಕೆಲಸ ಮಾಡಿದ್ದೇನೆ. ನಾವಿಬ್ಬರೂ ಸೇರಿ ಅನೇಕ ಸಭೆ, ಸಮಾರಂಭಗಳನ್ನು ಹಾಗೂ ಹೋರಾಟಗಳನ್ನು ನಡೆಸಿದ್ದು ಸಹ ಉಂಟು. ಕಾರ್ಮಿಕ ರಂಗದ ಸಂಘಟನೆ ಮಾಡುವ ಜೊತೆಗೆ ಕಾರ್ಮಿಕರಿಗೆ ಆಗುತ್ತಿರುವ ಅನ್ಯಾಯ ಮತ್ತು ಅವರ ಶೋಷಣೆಯನ್ನು ವಿರುದ್ಧ ಅನೇಕ ಸಂದರ್ಭಗಳಲ್ಲಿ ಅವರು ಸ್ವತಃ ಆ ಸ್ಥಳದಲ್ಲಿ ಇಲ್ಲದೇ ಇದ್ದರೂ ಕೂಡ ಒಂದು ಸಾರಿ ದಾವಣಗೆರೆಯಲ್ಲಿ ಒಂದು ಗಲಾಟೆ ನಡೆಯುತ್ತದೆ, ಒಂದು ಕೊಲೆಯಾಗುತ್ತದೆ, ಆದರೆ ಆ ಸ್ಥಳದಲ್ಲಿ ಸೂರಿಯವರು ಇರಲಿಲ್ಲ, ಅವರು ಇದ್ದಿದ್ದು ಹರಿಹರದಲ್ಲಿ, ದಾವಣಗೆರೆಯಲ್ಲಿ ನಡೆದಂಥ ಸಭೆ ಮುಗಿದ ಮೇಲೆ ಅವರು ಹರಿಹರಕ್ಕೆ ಹೋಗಿ ಕಾರ್ಮಿಕ ಸಭೆಯನ್ನು ನಡೆಸುತ್ತಿರತಕ್ಕಂಥ ಸಂದರ್ಭದಲ್ಲಿ ಗಲಭೆ ಉಂಟಾಗಿ ಅಲ್ಲಿ ಒಬ್ಬರು ಸಾಯುತ್ತಾರೆ. ಸೂರಿಯವರು ಸ್ಥಳದಲ್ಲಿ ಇಲ್ಲದೇ ಇದ್ದರೂ ಸಹ ಅವರ ಮೇಲೆ ಸುಳ್ಳು ಮೊಕದ್ದಮೆಯನ್ನು ಹೂಡಿ ಕೊನೆಗೆ ಸುಮಾರು ಎರಡರಿಂದ ಮೂರು ವರ್ಷಗಳ ಕಾಲ ಅನಾವಶ್ಯಕವಾಗಿ ಅವರು ಅಪರಾಧಿ ಅಲ್ಲದೇ ಇದ್ದರೂ ಕೂಡ ಜೈಲು ಶಿಕ್ಷೆಯನ್ನು ಅನುಭವಿಸಿದ್ದಾರೆ. ಬೇರೆ ಯಾರೇ ಆದರೂ ಸುಳ್ಳು ಮೊಕದ್ದಮೆಯ ಹಿನ್ನೆಲೆಯಲ್ಲಿ ಜೈಲು ಶಿಕ್ಷೆ ಅನುಭವಿಸಲು ಹಿಮ್ಮೆಟ್ಟುತ್ತಾರೆ. ಆದರೆ ಸೂರಿಯವರು ಯೋಚನೆಯನ್ನು ಮಾಡಲಿಲ್ಲ. ಅವರು ಜೈಲಿನಿಂದ ಹೊರಬಂದರು, ಕಾರ್ಮಿಕ ರಂಗವನ್ನು ಸಂಘಟನೆ ಮಾಡುವ ವಿಚಾರದಲ್ಲಿ ಇನ್ನೂ ಎತ್ತರಕ್ಕೆ ಏರಿಸತಕ್ಕಂಥ ಕೆಲಸವನ್ನು ಮಾಡಿದರು. ಅವರ ಕೊನೆಯ ಉಸಿರು ಇರುವವರೆಗೂ ಕೂಡ ಅವರು ನಂಬಿದಂಥ ಸಿದ್ಧಾಂತಕ್ಕೆ ಕಟ್ಟು ಬಿದ್ದು, ಅವರು ವೈಯಕ್ತಿಕವಾಗಿ ಎಷ್ಟೇ ಕಷ್ಟ-ನಷ್ಟಗಳನ್ನು ಅನುಭವಿಸಿದರೂ ಕೂಡ, ಜೈಲು ವಾಸವನ್ನು ಅನುಭವಿಸಿದರೂ ಕೂಡ ಅವರು ನಂಬಿದ ಮಾರ್ಕ್ಸ್‌ವಾದಿ ಸಿದ್ಧಾಂತವನ್ನು ಬಿಡಲಿಲ್ಲ. ಕೊನೆಯ ಉಸಿರಿನವರೆಗೂ ಮಾರ್ಕ್ಸ್‌ವಾದದ ಸಿದ್ಧಾಂತವನ್ನು ಜಪಿಸುತ್ತಲೇ ಅವರು ಕೊನೆಯ ಉಸಿರು ಎಳೆದಿರುವಂಥದ್ದನ್ನು ಈ ಸಂದರ್ಭದಲ್ಲಿ ನಾವು ವಿಶೇಷವಾಗಿ ಗಮನಿಸಬೇಕಾದಂತಹ ಅವಶ್ಯಕತೆ ಇದೆ ಎನ್ನುವ ಮಾತನ್ನು ನಾನು ಹೇಳುತ್ತೇನೆ. ಈಗಾಗಲೇ ನಮ್ಮ ಕೆಲವು ಸ್ನೇಹಿತರು ಹೇಳಿದ ಹಾಗೆ ದೇಶಾದ್ಯಂತ ಮತ್ತು ಪ್ರಪಂಚದಾದ್ಯಂತ ಅನೇಕ ಬದಲಾವಣೆಗಳನ್ನು ನಾವು ಕಾಣುತ್ತಿದ್ದೇವೆ. ಆರ್ಥಿಕ ಸಂಬಂಧಗಳು ಮತ್ತು ಕಾರ್ಮಿಕ ಸಂಬಂಧಗಳು ಬದಲಾವಣೆಗಳು ಆಗುತ್ತಿವೆ. ಇದನ್ನೆಲ್ಲಾ ನೋಡಿದಾಗ ಈ ಶ್ರಮ ಜೀವಿ ವರ್ಗದವರು ತಬ್ಬಲಿಯಾಗುತ್ತಿದ್ದಾರೆ, ಇದು ನಮ್ಮ ದೇಶದಲ್ಲಿ ಅಷ್ಟೇ ಅಲ್ಲ ಬೇರೆ ದೇಶಗಳಲ್ಲಿಯೂ ಕೂಡ ತಬ್ಬಲಿಯಾಗುತ್ತಿದ್ದಾರೆ. ಮುಂದೆ ಈ ವರ್ಗದವರ ಪರಿಸ್ಥಿತಿ ಏನಾಗುತ್ತದೆ? ಈ ವರ್ಗ ಏನಾಗಬಹುದು ಎನ್ನುವ ಚಿಂತನೆಯನ್ನು ನಾವು ಮಾಡಿದಾಗ ಭಯ ಆಗತಕ್ಕಂಥ ಪರಿಸ್ಥಿತಿ ಇದೆ. ಆ ಭಯದ ಪರಿಸ್ಥಿತಿಯಲ್ಲಿ ಕೂಡ ಮಾನ್ಯ ಸೂರ್ಯನಾರಾಯಣರಾವ್ ರವರು ತಾವು ನಂಬಿದಂತಹ ಸಿದ್ಧಾಂತವನ್ನು ಬಿಡದೆ ಅದನ್ನು ಪ್ರತಿಪಾದನೆ ಮಾಡಿದಂತಹ ಅನೇಕ ವಿರಳ ವ್ಯಕ್ತಿಗಳಲ್ಲಿ ಇವರೂ

ಕೂಡ ಒಬ್ಬರು ಎಂದು ಈ ಸಂಧರ್ಭದಲ್ಲಿ ಹೇಳುತ್ತಾ, ಇನ್ನು ಉಳಿದಂತೆ ತಾವೆಲ್ಲಾ ಏನು ಹೇಳಿದ್ದೀರಿ ಅದನ್ನು ಸಮರ್ಥನೆ ಮಾಡುತ್ತಾ ನನಗೆ ಈಗ ಮಾತನಾಡಲು ಅವಕಾಶ ನೀಡಿದ್ದಕ್ಕಾಗಿ ಮಾನ್ಯ ಅಧ್ಯಕ್ಷರಿಗೆ ವಂದನೆಯನ್ನು ಸಲ್ಲಿಸಿ, ಮೃತರ ಆತ್ಮಕ್ಕೆ ಶಾಂತಿಯನ್ನು ಕೋರುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

+ಶ್ರೀ ಕೆ.ಎಂ. ಕೃಷ್ಣಮೂರ್ತಿ (ಕಡೂರು).- ಸನ್ಮಾನ್ಯ ಅಧ್ಯಕ್ಷರೆ, ಶ್ರೀ ಬಿ.ಡಿ. ಜತ್ತಿ ಅವರು ಈ ರಾಜ್ಯದ ಮುಖ್ಯಮಂತ್ರಿಯಾಗಿ, ಈ ರಾಷ್ಟ್ರದಲ್ಲಿ ಉಪರಾಷ್ಟ್ರಪತಿಯಾಗಿ, ಹಂಗಾಮಿ ರಾಷ್ಟ್ರಪತಿಯಾಗಿ, ರಾಷ್ಟ್ರೀಯ ನೇತಾರರ ಸ್ಥಾನಕ್ಕೆ ಹೋಗಿದ್ದಾರೆ. ಅವರ ಜೀವನ ಚರಿತ್ರೆಯನ್ನು ನೋಡಿದಂತಹ ಸಂದರ್ಭದಲ್ಲಿ ಹುಟ್ಟು ಸಾವುಗಳ ಮಧ್ಯೆ ಹಂತ ಹಂತವಾಗಿ ಹಳ್ಳಿಯಿಂದ ದಿಲ್ಲಿಯವರೆಗೂ ಏನು ಒಂದು ನಾಣ್ನುಡಿ ಇದೆ ಅದರಂತೆ ಅವರು ರಾಜಕೀಯ ಜೀವನವನ್ನು ಮಾಡಿದ್ದಾರೆ. 1962ನೇ ಇಸವಿಯಲ್ಲಿ ನಾನು ಪ್ರಾಥಮಿಕ ಶಾಲೆಯ ವಿದ್ಯಾರ್ಥಿಯಾಗಿದ್ದಂತಹ ಸಂದರ್ಭದಲ್ಲಿ ಅವರು ನನ್ನ ಊರಾದಂತಹ ಕಡೂರಿಗೆ ಬಂದಿದ್ದರು. ನನ್ನ ತಂದೆಯವರೂ ಕೂಡ ಅಂದು ಕಾಂಗ್ರೆಸ್ ಪಕ್ಷದ ಕಾರ್ಯಕರ್ತರಾಗಿ ಪರಿಚಯ ಇದ್ದುದರಿಂದ ಮತ್ತು ಆ ಸಂದರ್ಭದಲ್ಲಿ ಅವರು ಪುರಸಭೆಯ ಅಧ್ಯಕ್ಷರು ಆಗಿದ್ದಂತಹ ಸಂದರ್ಭದಲ್ಲಿ ನಾನು ಅವರನ್ನು ಅವರ ವೇಷಭೂಷಣಗಳನ್ನು ನೋಡಿದಾಗ ಗಾಂಧೀಜಿಯ ಸಿದ್ಧಾಂತಕ್ಕೆ ತಕ್ಕ ಹಾಗೆ ತಮ್ಮ ವೇಷಭೂಷಣಗಳನ್ನು ಅಳವಡಿಸಿಕೊಂಡಿದ್ದರು. ಮಾನ್ಯ ಖಾದಿ ಬಟ್ಟೆ ಹಾಗೂ ಗಾಂಧೀ ಹೇಳಿದಂತಹ ಟೋಪ್ಪಿಗೆ ಇದನ್ನೆಲ್ಲಾ ಧರಿಸಿಕೊಂಡ ಮಾನ್ಯ ಬಿ.ಡಿ. ಜತ್ತಿಯವರು ನಮ್ಮ ರಾಜ್ಯದಲ್ಲಿ ಒಂದು ಚೇತನ ಶಕ್ತಿಯಾಗಿದ್ದರು, ಹಾಗೂ ಅವರು ಮಾಡಿದಂತಹ ಸಾಧನೆ ಅವರ ಜೀವನದ ನಡವಳಿಕೆ ಮುಂದಿನ ಪೀಳಿಗೆಗೆ ಮಾದರಿಯಾಗಿದೆ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಇವತ್ತು ಅಂತಹ ಒಬ್ಬ ಮಹಾನ್ ವ್ಯಕ್ತಿಯನ್ನು ನಮ್ಮ ಕನ್ನಡನಾಡು ಹಾಗೂ ಭಾರತ ದೇಶ ಕಳೆದುಕೊಂಡು ಒಂದು ಶೂನ್ಯ ಪರಿಸ್ಥಿತಿಯನ್ನು ನಾವು ಎದುರಿಸುತ್ತಿದ್ದೇವೆ ಎಂದು ಈ ಸಭೆಯ ಗಮನಕ್ಕೆ ತರುತ್ತಾ, ಇನ್ನು ಮಾನ್ಯ ಪುಟ್ಟಣ್ಣನವರು ನನ್ನ ತಂದೆಯ ಆತ್ಮೀಯ ಸ್ನೇಹಿತರಾಗಿದ್ದರು, ನನ್ನ ತಂದೆಯವರೂ ಕೂಡ 1946-50 ರವರೆಗೂ ಪ್ರಜಾಪ್ರತಿನಿಧಿ ಸಭೆಯ ಸದಸ್ಯರು ಆಗಿದ್ದು, ಹಿಂದೆ ನಮ್ಮ ಊರಿಗೆ ಹಾಗೂ ನಮ್ಮ ಮನೆಗೆ ಮಾನ್ಯ ಪುಟ್ಟಣ್ಣನವರು ಬಂದಂತಹ ನೆನಪುಗಳು ಕಾಡುತ್ತಿವೆ. ಅದರ ಜೊತೆಗೆ ಮಾನ್ಯ ಸೂರ್ಯನಾರಾಯಣರಾವ್ ಅವರು ಕೂಡ 1984ರಲ್ಲಿ ನಮ್ಮ ಜಿಲ್ಲೆಯ ಲೋಕಸಭಾ ಸ್ಥಾನಕ್ಕೆ ಎಡಪಂಥೀಯ ಅಭ್ಯರ್ಥಿಯಾಗಿ ನಿಲ್ಲಿಸಿದಂತಹ ಸಂದರ್ಭದಲ್ಲಿ ಅವರ ಜೊತೆಯಲ್ಲಿ ನಾನು ಇರುವಂತಹ ಒಂದು ಅವಕಾಶ ಸಿಕ್ಕಿತ್ತು. ಆ ಚುನಾವಣಾ ಪ್ರಚಾರದಲ್ಲಿ ಭಾಗವಹಿಸಿದಂತಹ ಸಂದರ್ಭದಲ್ಲಿ ಅವರ ಮನೋಭಾವವನ್ನು ನೋಡಿದಾಗ ಅವರು ಕಾರ್ಮಿಕರ ಪರವಾಗಿ ಒಂದು ಹೋರಾಟದ ಶಕ್ತಿಯಾಗಿದ್ದರು ಎಂದು ನಾನು ಈ ಸಭೆಯಲ್ಲಿ ತಿಳಿಸಬೇಕಾಗುತ್ತದೆ. ಮತ್ತು ಕಳೆದ ವಾರ ನಮ್ಮ ಜಿಲ್ಲೆಯ ಗಾನ ಸರಸ್ವತಿ, ಪದ್ಮವಿಭೂಷಣ ಡಾ।। ವೆಂಕಟಲಕ್ಷ್ಮಮ್ಮ ಅವರು ನಿಧನ ಹೊಂದಿದರು. ಅವರ ಹುಟ್ಟ ಸ್ವಾಭಾವಿಕ. ಯಾರು ಎಲ್ಲಿ ಹುಟ್ಟುತ್ತಾರೆ ಎನ್ನುವುದು ಗೊತ್ತಿಲ್ಲ. ಅದರೆ ಹುಟ್ಟಿದ ಮೇಲೆ ಅವರನ್ನು ಯಾರೋ ಒಬ್ಬರು ಮೈಸೂರಿಗೆ ಕರೆದುಕೊಂಡು ಹೋಗಿ ಅವರಿಗೆ ಸಂಸ್ಕಾರವನ್ನು ನೀಡುವುದರ ಮುಖಾಂತರ ಇವತ್ತು ರಾಷ್ಟ್ರ ಮಟ್ಟದ ಪ್ರಶಸ್ತಿಗೆ ಪಾತ್ರರಾದರು. ನಾಡೋಜ ಪ್ರಶಸ್ತಿ ಪಡೆದರು ಹಾಗೂ ಡಾಕ್ಟರೇಟ್

ಪ್ರಶಸ್ತಿಯನ್ನು ಸಹ ಪಡೆದರು. ಅವರು ಹುಟ್ಟಿದ್ದು ಕೇವಲ ಒಂದು ತಾಂಡದಲ್ಲಿ. ಮೈಸೂರು ಅರಮನೆಯ ನೃತ್ಯಗಾರ್ತಿಯಾಗಿ 1918ನೇ ಇಸವಿಯಿಂದ ಇಲ್ಲಿಯವರೆಗೂ ನಿರಂತರವಾಗಿ ಕೊನೆಯಗಳಿಗೆಯವರೆಗೂ ಸಹ ಸೇವೆ ಸಲ್ಲಿಸಿದರು. ಆದುದರಿಂದ ನಾನು ಈ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳಿಗೆ ಮನವಿ ಮಾಡುವುದೇನೆಂದರೆ, ರಾಜ್ಯಮಟ್ಟದಲ್ಲಿ ಡಾ॥ ವೆಂಕಟಲಕ್ಷ್ಮಮ್ಮ ಅವರ ಜ್ಞಾಪಕಾರ್ಥವಾಗಿ ನೃತ್ಯ ಹಾಗೂ ಭರತನಾಟ್ಯಕ್ಕೆ ಸಂಬಂಧಪಟ್ಟ ಹಾಗೆ ಏನಾದರೂ ಒಂದು ಸಂಸ್ಥೆಯನ್ನು ಸ್ಥಾಪಿಸಬೇಕೆಂದು, ಆ ಒಂದು ಕ್ಷೇತ್ರದ ಪರವಾಗಿ ನಾನು ಮನವಿ ಮಾಡಿಕೊಳ್ಳುತ್ತೇನೆ. ಈ ದಿವಸ ಇಂತಹ ಮಹಾನ್ ವ್ಯಕ್ತಿಗಳ ನಿಧನದ ವಿಷಯದ ಬಗ್ಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ಈ ನಿರ್ಣಯವನ್ನು ಬೆಂಬಲಿಸಿ ನನ್ನ ಮಾತನ್ನು ಮುಗಿಸುತ್ತೇನೆ.

+ಶ್ರೀ ಬಿ.ಎಸ್. ಪಾಟೀಲ್ (ಸಾಸನೂರು) ಕೃಷಿ ಮಾರುಕಟ್ಟೆ ಸಚಿವರು.- ಮಾನ್ಯ ಸಭಾಧ್ಯಕ್ಷರೆ, ದಿವಂಗತ ಮಾನ್ಯ ಬಿ.ಡಿ. ಜತ್ತಿಯವರ ದಿವ್ಯಚೇತನ ನಮ್ಮ ಸೃಷ್ಟಿಯ ಅಂತರಾಳದಲ್ಲಿ ಲೀನವಾಗಿ ನಮ್ಮ ರಾಜ್ಯ ಅದರಲ್ಲೂ ವಿಶೇಷವಾಗಿ ವಿಜಾಪುರ ಹಾಗೂ ರಾಯಚೂರು ಜಿಲ್ಲೆಗಳು ಅತ್ಯಂತ ಬಡವಾಗಿವೆ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛಿಪಡುತ್ತೇನೆ. ದಿವಂಗತ ಜತ್ತಿಯವರು ಆಗಿನ ಬಿಜಾಪುರ ಜಿಲ್ಲೆಯ ಅಂದರೆ ಇವತ್ತಿನ ಬಾಗಲಕೋಟೆ ಜಿಲ್ಲೆಯ ಜಮಖಂಡಿ ತಾಲ್ಲೂಕಿನ 'ಸಾವಳಗಿ' ಗ್ರಾಮದಲ್ಲಿ ಮಧ್ಯಮ ವರ್ಗದ ಕುಟುಂಬದಲ್ಲಿ ಜನಿಸಿ ಹಳ್ಳಿಯಿಂದ ದಿಲ್ಲಿಯವರೆಗೆ, ಗ್ರಾಮ ಪಂಚಾಯತಿ ಸದಸ್ಯತ್ವದಿಂದ ರಾಷ್ಟ್ರದ ಪ್ರಥಮ ಪ್ರಜೆಯಾಗಿ ಬೆಳೆದು ನಿಂತ ಒಬ್ಬ ಮಹಾನ್ ನಾಯಕ ಎಂದರೆ ತಪ್ಪಾಗಲಿಕ್ಕಿಲ್ಲ. ವಿಜಾಪುರದ ಗೋಳಗುಮ್ಮಟದ ಎತ್ತರಕ್ಕೆ ಬೆಳೆದು ತಾವೂ ಕೂಡ ಒಂದು ಕುಮ್ಮಟವಾಗಿ ಜೀವನಪರ್ಯಂತ ಒಂದು ಆದರ್ಶ ಪ್ರಾಯವಾದಂತಹ ವ್ಯಕ್ತಿ ದಿವಂಗತ ಶ್ರೀಮಾನ್ ಜಿ.ಡಿ. ಜತ್ತಿಯವರು. ಬೆಂಗಳೂರಿಗೆ ಆಗಮಿಸಿದಂತಹ ದಿಲ್ಲಿಯ ನಾಯಕರು ಬಹುತೇಕ ದಿವಂಗತ ಜತ್ತಿಯವರನ್ನು ಭೇಟಿ ಮಾಡದೇ ಇರುವವರು ಯಾರೂ ಇರಲಿಲ್ಲವೆಂದು ನನ್ನ ಭಾವನೆ. ದಿವಂಗತ ಜತ್ತಿಯವರು ಸರಳ ಸಜ್ಜನಿಕೆಯ ಸಾಕಾರ ಮೂರ್ತಿ ಹಾಗೂ ಅಪ್ಪಟ ಗಾಂಧಿವಾದಿಗಳು. ತಮ್ಮ ಜೀವನಪರ್ಯಂತ ಪ್ರಾಮಾಣಿಕತೆಯನ್ನು, ಕರ್ತವ್ಯ ಪ್ರಜ್ಞೆಯನ್ನು ಹಾಗೂ ತತ್ವನಿಷ್ಠೆಯನ್ನು ಉಳಿಸಿ ಬೆಳೆಸಿಕೊಂಡಂತಹ ಒಬ್ಬ ಮಹಾನ್ ವ್ಯಕ್ತಿ ದಿವಂಗತ ಜತ್ತಿಯವರು. ಅವರ ಒಂದು ಮಾರ್ಗದರ್ಶನದಲ್ಲಿ, ಅವರ ಅಶೀರ್ವಾದದಲ್ಲಿ ಕಳೆದ 42 ವರ್ಷಗಳ ಕಾಲದಿಂದ ನಾನು ಕೆಲಸ ಮಾಡುವಂತಹ ಭಾಗ್ಯ ನನ್ನದಾಗಿ ಅವರ ಜೀವನದ ಆದರ್ಶಗಳನ್ನು ನಾನು ಕೂಡ ಸ್ವಲ್ಪ ಮಟ್ಟಿಗೆ ಅಳವಡಿಸಿಕೊಳ್ಳುವುದಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡಿದ್ದೇನೆಂದು ಹೇಳುವುದಕ್ಕೆ ನನಗೆ ಬಹಳ ಸಂತೋಷ ಆಗುತ್ತದೆ. ದಿವಂಗತ ಜತ್ತಿಯವರು ಒಬ್ಬ ಶ್ರೇಷ್ಠ ರಾಜಕಾರಣಿ ಅಷ್ಟೇ ಅಲ್ಲ, ಧರ್ಮ ಪ್ರಚಾರಕರೂ ಆಗಿದ್ದರು. ಅದರ ಜೊತೆಗೆ ಬಸವಣ್ಣನವರ ತತ್ವಗಳನ್ನು ತಮ್ಮ ಜೀವನದುದ್ದಕ್ಕೂ ಅರಗಿಸಿಕೊಂಡು, ತಮ್ಮ ಜೀವನವನ್ನೇ ಅದಕ್ಕೆ ಮುಡುಪಾಗಿರಿಸಿಕೊಂಡ ಮಹಾನ್ ವ್ಯಕ್ತಿಯಾಗಿದ್ದರು. ಬಸವಣ್ಣನವರ "ಕಾಯಕವೇ ಕೈಲಾಸ" ಎನ್ನುವ ವಚನದಲ್ಲಿ ಅಪಾರ ನಂಬಿಕೆ ಇಟ್ಟುಕೊಂಡಿದಂತಹ ದಿವಂಗತ ಜತ್ತಿಯವರು ತಮ್ಮ ಕರ್ತವ್ಯ ಪ್ರಜ್ಞೆಗೆ ವಿಶೇಷವಾದಂತಹ ಆಸಕ್ತಿ ಉಳ್ಳವರಾಗಿದ್ದರು. ಅವರು ತಮ್ಮ ಸ್ಥಾನಮಾನಕ್ಕೆ ಎಂದೂ ಬೆಲೆ ಕೊಟ್ಟವರಲ್ಲ, ತಮ್ಮ ಕರ್ತವ್ಯವೇ ಶ್ರೇಷ್ಠ ಎನ್ನುವುದನ್ನು

ಅರಿತು ಜೀವನ ನಡೆಸಿಕೊಂಡು ಬಂದಂತಹ ಮಹಾನ್ ನಾಯಕರು. ಅವರು ಮಾನ್ಯ ನಿಜಲಿಂಗಪ್ಪನವರ ಸಚಿವ ಸಂಪುಟದ ಸದಸ್ಯರಾಗಿ, ಪಾಂಡಿಚೆರಿಯ ಲೆಫ್ಟಿನೆಂಟ್ ಗೌವರ್ನರ್ ಆಗಿ ಸೇವೆ ಸಲ್ಲಿಸಿದ್ದು ಅವರ ಕರ್ತವ್ಯನಿಷ್ಠೆಗೆ ಹೆಚ್ಚು ಪ್ರಾಧಾನ್ಯತೆ ಕೊಡುತ್ತಾರೆಯೇ ಹೊರತು ಸ್ಥಾನಮಾನಕ್ಕೆ ಅಲ್ಲ ಎನ್ನುವುದನ್ನು ತೋರಿಸಿಕೊಟ್ಟಂತಹ ಮಹಾನ್ ವ್ಯಕ್ತಿ. ಅವರು ನಿರ್ಮಿಸಿದ 'ಬಸವ ಭವನ', ಬಸವಣ್ಣನವರ ಜೀವನದ ಬಗ್ಗೆ ತಮ್ಮ ರಕ್ತದ ಪ್ರತಿ ಕಣಕದಲ್ಲಿ ಕೂಡ ಚಿಂತನೆ ಮಾಡುತ್ತಿದ್ದಂತಹ ಮಹಾನ್ ವ್ಯಕ್ತಿ.

12.10 ಪಿ.ಎಂ.

ನಮ್ಮ ಮಾನ್ಯ ಮುಖ್ಯಮಂತ್ರಿಯವರು ಹೇಳಿದ ಹಾಗೆ ಅವರಿಗೆ ನಡೆಯುವುದಕ್ಕೆ ಆಗದಿದ್ದರೂ ಕೂಡ ಇಂತಹ ಕಾರ್ಯಕ್ರಮಗಳಲ್ಲಿ ಅತ್ಯಂತ ನಿಷ್ಠೆಯಿಂದ ಬಂದು ಅದರಲ್ಲಿ ಭಾಗವಹಿಸುವಂತಹ ವ್ಯಕ್ತಿತ್ವ ಅವರಲ್ಲಿ ಇತ್ತು; ಸ್ವಾಮಿ ನಿಷ್ಠೆಯನ್ನು ಕೂಡ ಅವರ ಜೀವನದಲ್ಲಿ ಅಳವಡಿಸಿಕೊಂಡು ಬಂದಿದ್ದರು. ಮತ್ತೆ ಅವರು ಕಾಂಗ್ರೆಸ್ ಪಕ್ಷದಲ್ಲೂ ಕೂಡ ಅಪಾರವಾದಂತಹ ಅಭಿಮಾನವನ್ನು ಇಟ್ಟುಕೊಂಡು ತಮ್ಮ ನಾಯಕರಿಗೆ ತಮ್ಮ ಜೀವನ ಪರ್ಯಂತ ನಿಷ್ಠೆಯಿಂದ ನಡೆದುಕೊಂಡಂತಹ ವ್ಯಕ್ತಿತ್ವವನ್ನು ಉಳ್ಳಂಥವರು, ಇವರು ಬರೆದಂತಹ "ನನ್ನನ್ನು ನಾನು ಕಂಡಂತೆ" ಎಂಬ ಅವರ ಆತ್ಮಕಥೆಯನ್ನು ಓದಿದಾಗ ಅವರ ಜೀವನದ ಹಿರಿಮೆ ಗರಿಮೆಗಳ ಬಗ್ಗೆ ಎಲ್ಲರಿಗೂ ಅರ್ಥವಾಗುತ್ತದೆಂಬ ಮಾತನ್ನು ನಾನು ಹೇಳುತ್ತೇನೆ. ಅವರು ಒಬ್ಬ ಶ್ರೇಷ್ಠ ರಾಜಕಾರಣಿಯಲ್ಲದೆ, ಒಬ್ಬ ಶ್ರೇಷ್ಠ ಧರ್ಮ ಪ್ರಚಾರಕರೂ ಕೂಡ ಆಗಿದ್ದರು, ಮತ್ತೆ ಒಬ್ಬ ಸಂತರೂ ಕೂಡ ಆಗಿದ್ದರು ಎಂದು ಹೇಳಿದರೂ ತಪ್ಪಾಗುವುದಿಲ್ಲ. ಇದಕ್ಕೆ ಉದಾಹರಣೆಯಾಗಿ ಅವರ ಪಾರ್ಥಿವ ಶರೀರದ ಅಂತ್ಯ ಸಂಸ್ಕಾರದಲ್ಲಿ ನೆರೆದಿದ್ದಂತಹ ಜನ ಸಮೂದಾಯವನ್ನು ನೋಡಿದಾಗ ಇದು ನಮಗೆ ಅರ್ಥವಾಗಿದೆ. ಅಂತಹ ಒಬ್ಬ ಮಹಾನ್ ನಾಯಕರಾಗಿದಂತಹ ಶ್ರೀಮಾನ್ ಬಿ.ಡಿ. ಜತ್ತಿಯವರ ಅಗಲಿಕೆಯಿಂದ ನಮ್ಮ ರಾಜ್ಯಕ್ಕೆ ಅದರಲ್ಲೂ ವಿಶೇಷವಾಗಿ ನಮ್ಮ ಬಿಜಾಪುರ ಜಿಲ್ಲೆಗೆ ಬಾಗಲಕೋಟೆಗೆ ಅಪಾರವಾದಂತಹ ಹಾನಿಯಾಗಿದೆ, ಎನ್ನುವಂತಹ ಮಾತನ್ನು ನಾನು ಹೇಳುತ್ತೇನೆ. ಅವರು ಯಾವ ರೀತಿಯಾಗಿ ನಡೆದುಕೊಂಡು ಬಂದರು ಎನ್ನುವಂಥಾದ್ದು ಬಹಳ ಮಹತ್ವವಾದಂಥಾದ್ದು. ನಾವು ಅವರ ಆದರ್ಶನಗಳನ್ನು ನಡೆಸಿಕೊಂಡು, ನುಡಿಸಿಕೊಂಡು ಹೋದಾಗ ಮಾತ್ರ ನಿಜವಾದ ಶ್ರದ್ಧಾಂಜಲಿಯನ್ನು ಅವರ ಆತ್ಮಕ್ಕೆ ಸಲ್ಲಿಸಿದಂತೆ ಆಗುತ್ತದೆನ್ನುವಂತಹ ಮಾತನ್ನು ಹೇಳುತ್ತೇನೆ. ನಾವೆಲ್ಲರೂ ಅವರ ದಿವ್ಯ ಚೇತನಕ್ಕೆ ಪರಮಾತ್ಮನು ಚಿರಶಾಂತಿಯನ್ನು ನೀಡಲಿ ಎನ್ನುವಂತಹ ಪ್ರಾರ್ಥನೆಯನ್ನು ಮಾಡಿಕೊಂಡು ಮತ್ತೊಮ್ಮೆ ಅವರ ಆತ್ಮಕ್ಕೆ ಚಿರಶಾಂತಿಯನ್ನು ಆ ದೇವರು ನೀಡಲಿ ಎಂದು ಹೇಳುತ್ತಾ, ಇದರ ಜೊತೆಗೆ ನಿಧನರಾದಂಥ ಇನ್ನಿತರ ಸದಸ್ಯರುಗಳಿಗೆ ನಾನು ಗೌರವಪೂರ್ವಕವಾದಂತಹ ಶ್ರದ್ಧಾಂಜಲಿಯನ್ನು ಅರ್ಪಿಸಿ ಅವರಿಗೆ ಆ ದೇವರು ಆತ್ಮ ಶಾಂತಿಯನ್ನು ನೀಡಲಿ ಎಂದು ಪ್ರಾರ್ಥಿಸುತ್ತೇನೆ. ಈ ಬಗ್ಗೆ ನಾನು ಮಾತನಾಡಲು ಅವಕಾಶವನ್ನು ಕೊಟ್ಟಂತಹ ತಮಗೆ ವಂದಿಸಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

+ಶ್ರೀ ಬಿ. ಸೋಮಶೇಖರ್ (ಮಳವಳ್ಳಿ)– ಮಾನ್ಯ ಅಧ್ಯಕ್ಷರೇ, ಕಳೆದ ಅಧಿವೇಶನದಿಂದ ಈ ಅಧಿವೇಶನದ ಅಂತರಲ್ಲಿ ನಾವು ಕೆಲವು ವ್ಯಕ್ತಿಗಳನ್ನು ಕಳೆದುಕೊಂಡಿದ್ದೇವೆ. ಅದರಲ್ಲಿ ಬಹಳ

ಪ್ರಮುಖವಾಗಿ ನಮ್ಮ ರಾಜ್ಯದ ಹಿರಿಯ ಮುತ್ಸದ್ದಿಯಾಗಿದ್ದಂತಹ ಶ್ರೀ ಬಸಪ್ಪ ದಾನಪ್ಪ ಜತ್ತಿಯವರನ್ನು ಇವತ್ತು ನಾವು ಕಳೆದುಕೊಂಡಿದ್ದೇವೆ. ಇವರ ಬಗ್ಗೆ ನನ್ನ ಹಿಂದೆ ಮಾತನಾಡಿದಂತಹ ಎಲ್ಲಾ ಮುಖಂಡರು ಹೇಳಿದ ಹಾಗೆ ಇವರು ಒಬ್ಬ ಸರಳಜೀವಿ ಹಾಗೂ ಗಾಂಧಿವಾದಿಯಾಗಿದ್ದರು. ಇವರಿಗೆ ಡೆಸ್ಟಿನಿಯಲ್ಲಿ ನಂಬಿಕೆ ಇತ್ತು, ಇದಕ್ಕೆ ನಾನು ಒಂದು ಉದಾಹರಣೆಯನ್ನು ಅವರಿಂದಲೇ ಕೇಳಿಕೊಂಡಿದ್ದೇನೆ. ನನಗೆ ಅವರು ಹಳೆಯ ಪರಿಚಯ ಏನೂ ಅಲ್ಲ, ನಾವು ಈಗೀಗ ಬಂದಿರುವಂಥವರು, ಇವರು ಸ್ವಾತಂತ್ರ್ಯ ಪೂರ್ವದ ರಾಜಕಾರಣಿಯಾಗಿದ್ದಂಥವರು. ನಮ್ಮ ಸರ್ಕಾರ 1983ರಲ್ಲಿ ಅಧಿಕಾರಕ್ಕೆ ಬಂದಾಗ ನಾನು ಪ್ರಾಥಮಿಕ ಶಿಕ್ಷಣ ಸಚಿವನಾಗಿದ್ದೆ, ನಾನು ಮತ್ತು ಮಾನ್ಯ ಬಿ.ಡಿ. ಜತ್ತಿಯವರು ಒಂದು ಸಮಾರಂಭದಲ್ಲಿ ಭಾಗವಹಿಸುವಂತಹ ಸಂದರ್ಭ ಬಂತು. ಆಗ ಅವರು ನನ್ನನ್ನು, ನೀವು ಯಾವ ಕ್ಷೇತ್ರದಿಂದ ಗೆದ್ದಿದ್ದೀರೆಂದು ಕೇಳಿದರು. ಆಗ ನಾನು, ಮಳವಳ್ಳಿ ಕ್ಷೇತ್ರದಿಂದ ಪ್ರಥಮ ಬಾರಿಗೆ ಗೆದ್ದಿದ್ದೇನೆಂದು ಹೇಳಿದೆ, ಅದಕ್ಕೆ ಅವರು ಬಹಳ ಸಂತೋಷಪಟ್ಟು, ನಮ್ಮ ಮಲ್ಲಿಕಾರ್ಜುನ ಸ್ವಾಮಿಯವರು ಈ ಕ್ಷೇತ್ರದಲ್ಲಿದ್ದರು. ನೀವು ಬಹಳ ಚಿಕ್ಕ ವಯಸ್ಸಿನಲ್ಲಿಯೇ ಮಂತ್ರಿಗಳಾಗಿದ್ದೀರಿ, ನಿಮಗೆ ಬಹಳ ಭವಿಷ್ಯವಿದೆ, ನೀವು ಇನ್ನು ಉತ್ತಮವಾದಂತಹ ರೀತಿಯಲ್ಲಿ ಕೆಲಸ ಮಾಡಬೇಕೆಂದು ಹೇಳಿದರು. ಆಗ ನಾನು ಅವರಿಗೆ, ಇನ್ನು ಚಿಕ್ಕ ವಯಸ್ಸಿನಲ್ಲಿಯೇ ನಾನು ಶಾಸಕನಾಗಬೇಕಾಗಿತ್ತು, ಅದರೆ 1978ರಲ್ಲಿ ನನಗೆ ಟಿಕೇಟ್ ಸಿಗುವುದನ್ನು ತಪ್ಪಿಸಿದರು, ಎಂದು ಹೇಳಿದೆ. ಅದಕ್ಕೆ ಅವರು ನನಗೆ ಒಂದು ಮಾತನ್ನು ಹೇಳಿದರು. ಅದು ಏನೆಂದರೆ, ಯಾವಾಗಲೂ ಏನು ಆಯಿತು ಎಂಬ ಬಗ್ಗೆ ನಾವು ಪಶ್ಚಾತ್ತಾಪ ಪಡಬಾರದು. ಇಲ್ಲಿ ನಮಗೆ ಏನು ಕೆಟ್ಟದಾಗುತ್ತದೆ. ಅದು ಮುಂದಕ್ಕೆ ಒಳ್ಳೆಯದಾಗುತ್ತದೆನ್ನುವುದನ್ನು ನಾವು ನೆನಪಿಸಿಕೊಳ್ಳಬೇಕೆಂಬ ಮಾತನ್ನು ಹೇಳಿದರು. ಅದಕ್ಕೆ ನಾನು ಏನು ಸಾರ್, ತಾವು ಈ ರೀತಿಯಾಗಿ ಹೇಳುತ್ತೀರಿ, ಎಂದು ಕೇಳಿದೆ. ಅದಕ್ಕೆ ಅವರು ನಾನು ಒಂದು ಕತೆಯನ್ನು ಹೇಳುತ್ತೇನೆ, ಕೇಳಿ ಎಂದು ಹೇಳಿದರು. ನಮಗೆ ಏನು ಆಗುತ್ತದೆ, ಅದು ಎಲ್ಲಾ ಒಳ್ಳೆಯದಕ್ಕೆ ಎನ್ನುವುದಕ್ಕೆ ಒಂದು ಕತೆಯನ್ನು ನನಗೆ ಹೇಳಿದರು. ಅದು ಏನೆಂದರೆ, ಒಬ್ಬ ರಾಜ ಇದ್ದ, ಅವನು ಯಾವಾಗಲೂ ಬೇಟೆಯಾಡಲು ಮಂತ್ರಿಯ ಜೊತೆಯಲ್ಲಿ ಹೋಗುತ್ತಿದ್ದನ್ನು. ಒಂದು ದಿವಸ ಕಾಡಿನಲ್ಲಿ ಬೇಟೆಯಾಡುವಂತಹ ಸಂದರ್ಭದಲ್ಲಿ ರಾಜನ ಬೆರಳು ಕತ್ತರಿಸಿ ಹೋಗುತ್ತದೆ, ಆಗ ನೋವಾಗುತ್ತದೆ. ಆಗ ರಾಜ ಏನು ಬಹಳ ನೋವಾಯಿತಲ್ಲಾ ಎಂದಾಗ ಮಂತ್ರಿ ಏಕೆ ರಾಜರೇ ಬಹಳ ಒಳ್ಳೆಯದಾಯಿತು ಬಿಡಿ, ಎಂದನು. ಆಗ ರಾಜ ಅರಮನೆಗೆ ಬಂದು ಈ ಮಂತ್ರಿಯನ್ನು ಕಾರಾಗೃಹದಲ್ಲಿಡಿ, ಎಂದು ಹೇಳಿದ, ಆಗ ಆ ಮಂತ್ರಿ ಒಳ್ಳೆಯದಾಯಿತು ಎಂದು ಹೇಳಿ ಕಾರಾಗೃಹಕ್ಕೆ ಹೋದನು. ರಾಜ ಮತ್ತೊಮ್ಮೆ ಬೇಟೆಗೆ ಕಾಡಿಗೆ ಹೋಗುತ್ತಾನೆ, ಆಗ ಅಲ್ಲಿ ಒಬ್ಬ ಮನುಷ್ಯನನ್ನು ಮಾರಮ್ಮನಿಗೆ ಆಹುತಿ ಕೊಡಲು ಹುಡುಕುತ್ತಿರುತ್ತಾರೆ. ಅದಕ್ಕೆ ಈ ರಾಜನೇ ಸಿಗುತ್ತಾನೆ, ಇವರನ್ನು ಆಹುತಿ ಕೊಡಲು ದೇಹದಲ್ಲಿ ಏನು ಊನವಾಗಿರಬಾರದೆಂದು ಬಟ್ಟೆಯನ್ನು ಕಳಚಿ ನೋಡಿದಾಗ ಇವರ ಬೆರಳು ಕತ್ತರಿಸಿತ್ತು, ಅದಕ್ಕೆ ಇವರ ಬೆರಳು ಊನವಾಗಿದೆ, ಇವರನ್ನು ಬಿಟ್ಟು ಬಿಡಿ, ಎಂದು ಹೇಳಿದರು. ರಾಜ ಅವರ ಮನೆಗೆ ವಾಪಸ್ಸು ಬರುತ್ತಾನೆ, ಬಂದು ಕಾರಾಗೃಹದಲ್ಲಿದ್ದಂತಹ ಮಂತ್ರಿಯವರನ್ನು ಕರೆಸುತ್ತಾರೆ. ಆ ಮಂತ್ರಿಗೆ ನಡೆದಂತಹ ವಿಷಯವೆಲ್ಲವನ್ನು ಹೇಳುತ್ತಾನೆ, ಅದಕ್ಕೆ ಮಂತ್ರಿ ಆಗುವುದೆಲ್ಲಾ ಒಳ್ಳೆಯದಕ್ಕೆ ಎಂದು ಹೇಳಿದ್ದು, ಎನ್ನುತ್ತಾನೆ. ಆ ದಿವಸ ನಿಮಗೆ ಬೆರಳು ಕತ್ತರಿಸಿ ಹೋಗದಿದ್ದರೆ, ನೀವು ಆಹುತಿಯಾಗುತ್ತಿದ್ದಿರಿ, ಅದು ನಿಮಗೆ

ತಪ್ಪಿತು, ಆ ದಿವಸ ನನ್ನನ್ನು ಕಾರಾಗೃಹಕ್ಕೆ ಕಳುಹಿಸದೇ ಹೋಗಿದ್ದರೆ, ನಾನು ಇವತ್ತು ನಿಮ್ಮ ಜೊತೆಯಲ್ಲಿ ಇರುತ್ತಿದ್ದೆ, ಆಗ ಅವರು ನಿಮ್ಮನ್ನು ಬಿಟ್ಟು ನನ್ನನ್ನು ಕಡಿದು ಹಾಕುತ್ತಿದ್ದರು ಎಂದು ಹೇಳಿದನು. ಅದಕ್ಕೆ ಹೇಳುವಂಥಾದ್ದು ಇನ್ನು ಮುಂದೆ ನೀನು ಬೆಳೆಯಬೇಕು, ಪಶ್ಚಾತ್ತಾಪವನ್ನು ಪಡಬಾರದು, ಎಂದು ಹೇಳಿದರು. ನಾನು ಅವರು ಹೇಳಿದಂತಹ ಈ ಮಾತನ್ನು ಪ್ರತಿ ಬಾರಿಯೂ ಜ್ಞಾಪಕ ಮಾಡಿಕೊಳ್ಳುತ್ತೇನೆ. ಅವರು ನನಗೆ ಎಷ್ಟು ಉತ್ತಮವಾದಂತಹ ನಿರ್ದೇಶನವನ್ನು ಕೊಟ್ಟರು, ಇದು ನಡೆದು 20 ವರ್ಷಗಳಾದರೂ ಈಗಲೂ ನಾನು ಅವರನ್ನು ನೆನಪಿಸಿಕೊಳ್ಳುತ್ತೇನೆ. ಅವರು ಬಹಳ ಸರಳಜೀವಿ ಮತ್ತು ಗಾಂಧೀವಾದಿಗಳು, ಜೊತೆಗೆ ಮೊದಲಿನಿಂದಲೂ ಬಸವಣ್ಣನವರ ತತ್ವಕ್ಕೆ ಅಂಟಿಕೊಂಡು ಬಂದಂಥವರು. ಆದ್ದರಿಂದಲೇ ಅವರು ಭೂ ಸುಧಾರಣಾ ವಿಷಯಕ್ಕೆ ಹೆಚ್ಚು ಮಹತ್ವವನ್ನು ಕೊಟ್ಟು ಅವರ ಅಧಿಕಾರದ ಅವಧಿಯಲ್ಲಿ ಮಾನ್ಯ ಬಸವಲಿಂಗಪ್ಪನವರನ್ನು ಮಂತ್ರಿಗಳನ್ನಾಗಿ ತೆಗೆದುಕೊಂಡು ಸಾಮಾಜಿಕ ಸುಧಾರಣೆಗಳನ್ನು ತರುವಂತಹ ಕೆಲಸವನ್ನು ಅವರ ಕಾಲದಲ್ಲಿ ಮಾಡಿದರು. ನಾನು ಅವರ ಬಗ್ಗೆ ಒಂದು ನಿದರ್ಶನವನ್ನು ಹೇಳುವುದಾದರೆ, ಅವರು ವಿಭೂತಿಯನ್ನು ಹಣೆಗೆ ಇಟ್ಟುಕೊಳ್ಳುವಂಥಾದ್ದು ಇತ್ತು, ಇದರಿಂದ ಅವರು ಬಸವಣ್ಣನವರ ಅನುಯಾಯಿಗಳೆಂಬುದು ಗೊತ್ತಾಗುತ್ತಿತ್ತು. ಅವರು ಎಂತಹ ದೊಡ್ಡ ಸ್ಥಾನಕ್ಕೆ ಹೋದರೂ ಕೂಡ ವಿಭೂತಿಯನ್ನು ಹಚ್ಚಿಕೊಳ್ಳುತ್ತಿದ್ದರು. ಅಷ್ಟು ಅವರಿಗೆ ಬಸವಣ್ಣನವರ ಮೇಲೆ ನಂಬಿಕೆ, ಭಕ್ತಿ ಇತ್ತು. ಅವರು ನಿಜವಾಗಲೂ 90 ವರ್ಷಗಳ ಕಾಲ ಜೀವಂತವಾಗಿ ಇದ್ದರು. ಇನ್ನು ಅವರು ಇರಬೇಕಾಗಿತ್ತು ಎನಿಸುತ್ತದೆ, ಅವರು ತುಂಬು ಜೀವನವನ್ನು ನಡೆಸಿದ್ದಾರೆ, ನಮಗೆಲ್ಲರಿಗೂ ಮಾರ್ಗದರ್ಶಕರಾಗಿದ್ದಾರೆ ಮತ್ತೆ ಬಹಳ ಪ್ರಾಮಾಣಿಕರು, ಸರಳ ಜೀವಿಗಳಾಗಿದ್ದರು. ನಾವು ಅವರ ಹಾದಿಯನ್ನೇ ಅನುಸರಿಸಿದರೆ, ಅವರ ಆತ್ಮಕ್ಕೆ ನಿಜವಾದ ಶಾಂತಿಯನ್ನು ಕೊಟ್ಟ ಹಾಗೆ ಆಗುತ್ತದೆಂದು ನಾನು ಹೇಳುತ್ತೇನೆ.

ಇನ್ನು ಮಾನ್ಯ ಎಸ್. ಸೂರ್ಯನಾರಾಯಣರಾವ್ ರವರು 1983ರಲ್ಲಿ ನಾವು ಪ್ರಥಮ ಬಾರಿಗೆ ಶಾಸಕರಾದಂತಹ ಸಂದರ್ಭದಲ್ಲಿ ಇದೇ ಸನದನಲ್ಲಿ ಇದ್ದರು. ಇವರಿಗೆ ಕಾರ್ಮಿಕರ ವಿಚಾರದಲ್ಲಿ ಎಷ್ಟು ಕಳಕಳಿ ಇತ್ತೆಂದರೆ ವಿಧಾನ ಸಭೆಯಲ್ಲಿ ಪ್ರತಿಸಾರಿಯೂ ಕಾರ್ಮಿಕರಿಗೆ ಸಂಬಂಧಪಟ್ಟಂತಹ ಕಾನೂನುಗಳನ್ನು, ಮಸೂದೆಗಳನ್ನು ತಂದಾಗ ಅದರಲ್ಲಿ ಎಲ್ಲಾದರೂ ಕಾರ್ಮಿಕರ ಹಿತಕ್ಕೆ ತೊಂದರೆ ಇದ್ದರೂ, ಅದನ್ನು ಪ್ರತಿಭಟನೆ ಮಾಡುತ್ತಿದ್ದರು. ಇವರು ಕೊನೆ ಉಸಿರು ಇರುವವರೆಗೂ ಯಾವುದೇ ರೀತಿಯಲ್ಲೂ ರಾಜೀಯಾದವರು ಅಲ್ಲ, ಮತ್ತೆ ಯಾವುದೇ ಅಧಿಕಾರಕ್ಕೆ ಆಸೆ ಪಟ್ಟವರೂ ಅಲ್ಲ. ಇವರು ಆ ರೀತಿ ಅಧಿಕಾರಕ್ಕೆ ಆಸೆ ಹೊಂದಿದವರು ಆಗಿದ್ದರೆ ಯಾವ ಯಾವುದೋ ಪಕ್ಷಗಳೊಂದಿಗೆ ರಾಜೀ ಮಾಡಿಕೊಂಡು ಅನೇಕ ಬಾರಿ ಶಾಸಕರಾಗಬಹುದಾಗಿತ್ತು. ಆದರೆ ಅವರು ಮಾರ್ಕ್ಸ್‌ವಾದಿ ಸಿದ್ಧಾಂತಕ್ಕೆ ಅಂಟಿಕೊಂಡು ಅವರು ಜೀವನ ಮಾಡಿಕೊಂಡು ಬಂದರು. ಇವರ ನಿಧನದಿಂದಾಗಿ ಇಡೀ ಕಾರ್ಮಿಕ ವರ್ಗಕ್ಕೆ ಬಹಳ ನಷ್ಟವಾಗಿದೆ ಎನ್ನುವ ಮಾತನ್ನು ಹೇಳುತ್ತೇನೆ. ಅದೇ ರೀತಿಯಲ್ಲಿ ಇನ್ನು ಅನೇಕ ಮಾನ್ಯ ಸದಸ್ಯರುಗಳು ತೀರಿಕೊಂಡಿದ್ದಾರೆ. ಅವರ ಆತ್ಮಕ್ಕೆ ಶಾಂತಿಯನ್ನು ಕೋರುತ್ತಾ, ತಾವು ಏನು ಈ ಸಂತಾಪ ಸೂಚನೆಯ ನಿರ್ಣಯವನ್ನು ಮಂಡಿಸಿದ್ದೀರಿ ಅದಕ್ಕೆ ನಮ್ಮ ಪಕ್ಷದ ಪತಿಯಿಂದ ಸಂಪೂರ್ಣ ಬೆಂಬಲವನ್ನು ನೀಡುತ್ತಾ, ನನಗೆ ಮಾತನಾಡಲು ಅವಕಾಶವನ್ನು ಕೊಟ್ಟದ್ದಕ್ಕಾಗಿ ತಮಗೂ ವಂದಿಸಿ, ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

+ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರ ಸಚಿವರು).- ಮಾನ್ಯ ಅಧ್ಯಕ್ಷರೇ, ತಾವು ಸಂತಾಪ ಸೂಚನೆಯ ನಿರ್ಣಯವನ್ನು ಮಂಡಿಸುವಂತಹ ಸಂದರ್ಭದಲ್ಲಿ ಅಭಿವ್ಯಕ್ತಪಡಿಸಿದಂತಹ ಅಭಿಪ್ರಾಯಕ್ಕೆ, ಹಾಗೂ ಸಭಾ ನಾಯಕರು ಹಾಗೂ ಪ್ರತಿಪಕ್ಷದ ನಾಯಕರೂ, ಮತ್ತು ಗೌರವಾನ್ವಿತ ಸದಸ್ಯರುಗಳು ಅಭಿವ್ಯಕ್ತಪಡಿಸಿದಂತಹ ಅಭಿಪ್ರಾಯಗಳಿಗೆ ನನ್ನ ಸಹಮತವನ್ನು ಸೂಚಿಸುತ್ತಾ, ನಾನು ಕೂಡ ಈ ಬಗ್ಗೆ ಒಂದೆರಡು ಮಾತುಗಳನ್ನು ಹೇಳಲು ತಮ್ಮ ಅನುಮತಿಯನ್ನು ಪಡೆದು ಹೇಳಲಿಚ್ಛಿಸುತ್ತೇನೆ. ಶ್ರೀಮಾನ್ ಬಿ.ಡಿ. ಜತ್ತಿಯವರನ್ನು ಇತ್ತೀಚಿನ ದಿವಸಗಳಲ್ಲಿ ಅಭಿನವ ಬಸವಣ್ಣನೆಂದು ಕರೆಯುತ್ತಿದ್ದರು. ಕನ್ನಡಲ್ಲಿ "ಆಡು ಮುಟ್ಟದ ಸೊಪ್ಪಿಲ್ಲ" ಎನ್ನುವ ಮಾತಿದೆ. ಆ ರೀತಿಯಲ್ಲಿ ನಮ್ಮ ಶ್ರೀ ಬಿ.ಡಿ. ಜತ್ತಿಯವರು ಅನುಭವಿಸದೇ ಇರುವಂತಹ ಜನ ತಾಂತ್ರಿಕ ವ್ಯವಸ್ಥೆಯ ಯಾವ ಸ್ಥಾನಗಳೂ ಉಳಿದಿರಲಿಲ್ಲ. ಗ್ರಾಮ ಪಂಚಾಯಿತಿಯ ಅಧ್ಯಕ್ಷ ಸ್ಥಾನದಿಂದ ಹಿಡಿದ ರಾಷ್ಟ್ರಾಧ್ಯಕ್ಷ ಸ್ಥಾನದವರೆಗೆ ಅವರು ಎಲ್ಲಾ ಹಂತಗಳಲ್ಲಿ, ಎಲ್ಲಾ ಮಜಲುಗಳನ್ನು ಏರಿದವರಾಗಿದ್ದಾರೆ. ಅವರು ಎಲ್ಲಾ ಕಡೆಗಳಲ್ಲೂ ಸಮರ್ಥವಾಗಿ ಅಧಿಕಾರವನ್ನು ನಿಭಾಯಿಸಿದ್ದಾರೆ. ಸ್ವಾತಂತ್ರ್ಯ ಪೂರ್ವದ ಮತ್ತು ಸ್ವಾತಂತ್ರ್ಯೋತ್ತರ ಭಾರತದ ಕೆಲವೇ ಕೆಲವು ಕೊಂಡಿಗಳು ದಿನೇ ದಿನೇ ಕಳಚಿಕೊಳ್ಳುತ್ತಿವೆ. ಹಾಗೆಯೇ ಶ್ರೀಮಾನ್ ಬಿ.ಡಿ. ಜತ್ತಿಯವರ ನಿಧನದಿಂದ ಇಂತಹ ಒಂದು ಕೊಂಡಿ ಕಳಚಿದೆ ಎಂದು ನಾನು ಭಾವನೆ ಮಾಡುತ್ತೇನೆ. ಈ ವಾಮನಮೂರ್ತಿ ತಾನು ನಂಬಿದ್ದು ಭಕ್ತಿ ಮಾರ್ಗ, ಬಸವಣ್ಣನವರ ಆಚಾರವಿಚಾರಗಳನ್ನು ಬರೀ ಪ್ರಚಾರದಿಂದ ಮಾತ್ರ ಅವರು ನಂಬಿರಲಿಲ್ಲ. ಅವರು ಅದನ್ನು ಸದಾ ತನ್ನದಾಗಿಸಿಕೊಂಡಿದ್ದವರಾಗಿದ್ದರು. ನಾನು ಅವರನ್ನು ಆಗಾಗ್ಗೆ ಸಂಪರ್ಕ ಮಾಡಿದ್ದುಂಟು, ಅವರ ದರ್ಶನ ಮತ್ತು ಆಶೀರ್ವಾದವನ್ನು ಪಡೆದಿದ್ದುಂಟು. ಮತ್ತು ಅವರ ಜೊತೆಯಲ್ಲಿ ಚರ್ಚೆಯನ್ನು ಸಹ ಮಾಡಿರುತ್ತೇನೆ. ರಾಜ್ಯದ ಸಮಸ್ಯೆಗಳ ಪ್ರಶ್ನೆಗಳು ಬಂದಾಗ ಅದು ಕಾವೇರಿ ವಿವಾದವಿರಬಹುದು. ಕೃಷ್ಣಾನದಿಯ ವಿವಾದವಿರಬಹುದು, ನೆಲದ ವಿಚಾರವಿರಬಹುದು, ಅವರು ಆಸಕ್ತಿಯಿಂದ ಬಂದು ಸಭೆಯಲ್ಲಿ ಪಾಲ್ಗೊಂಡು ತಮ್ಮ ಅಭಿಪ್ರಾಯವನ್ನು ಮುಕ್ತವಾಗಿ ಹೇಳತಕ್ಕಂಥ ಒಬ್ಬ ಸರಳ ಜೀವಿಯಾಗಿದ್ದರು. ಶ್ರೀಯುತರ ಆದರ್ಶ, ಬದುಕು, ಸರಳ ಜೀವನ, ಸಜ್ಜನಿಕೆ, ಅದೆಲ್ಲಕ್ಕಿಂತಲೂ ವಿಶೇಷವಾಗಿ ಅವರಿಗೆ ಜೀವನದಲ್ಲಿ ತೃಪ್ತಿಯಿತ್ತು. ಈ ತೃಪ್ತಿಯನ್ನು ಅವರು ಆಗಾಗ್ಗೆ ನಮ್ಮ ಜೊತೆಯಲ್ಲಿ ಹಂಚಿಕೊಳ್ಳುತ್ತಿದ್ದರು. ಶ್ರೀಯುತರ ನಿಧನದಿಂದ ರಾಜ್ಯಕ್ಕೆ ತುಂಬಲಾರದಂತಹ ನಷ್ಟವಾಗಿದೆ. ಅವರ ನೆನಪುಗಳು ಚಿರಸ್ಥಾಯಿಯಾಗಿ ಕರ್ನಾಟಕದಲ್ಲಿ ಉಳಿಯುತ್ತವೆ. ಮತ್ತು ಹಾಗೆ ಉಳಿಯುವುದಕ್ಕೆ ನಮ್ಮ ಕಡೆಯಿಂದ ಏನೇನು ಪ್ರಯತ್ನಗಳನ್ನು ಮಾಡಬೇಕೋ ಅದನ್ನು ಮಾಡುವುದಕ್ಕೆ ನಾವು ಸದಾ ಸಿದ್ಧರಾಗಿದ್ದೇವೆಂಬ ಮಾತನ್ನು ಹೇಳುತ್ತಿದ್ದೇನೆ.

ಶ್ರೀಮಾನ್ ಎಸ್. ಸೂರ್ಯನಾರಾಯಣರಾವ್ ರವರು "ಕಾಮ್ರೆಡ್ ಸೂರಿ" ಅನೇಕ ಹೋರಾಟಗಳ ಜೊತೆಗೆ ನಾನು ಅವರ ಜೊತೆಗೂಡಿದ್ದೇನೆ. ಶ್ರೀಯುತರು 1983ರಲ್ಲಿ ರೈತ ಕಾರ್ಮಿಕ ಹೋರಾಟ ಜಾಥಾ ಮಾಡಿದ್ದರು. ಆ ಸಮಯದಲ್ಲಿ 18 ದಿವಸಗಳ ಕಾಲ ರಾಜ್ಯದ ಉದ್ದಗಲಕ್ಕೆ ನಾವುಗಳು ನಡೆದುಕೊಂಡು ಬಂದ ರೀತಿ, ಸುಮಾರು ಹತ್ತಿರ-ಹತ್ತಿರ 600

ಕಿಲೋಮೀಟರ್ ದೂರ ನಡೆದಿದ್ದೇವೆ. ಬೆಂಗಳೂರಿನಲ್ಲಿ ಸೇರಿದ ಒಂದು ದೊಡ್ಡ ಸಭೆ ಸಮಾರಂಭ ಅತ್ಯಂತ ಆಶ್ಚರ್ಯ ತಂದಿದ್ದೆತ್ತೆಂದರೆ, ರೈತ ಕಾರ್ಮಿಕ ಹೋರಾಟ, ಅದರ ಅಧ್ಯಕ್ಷ ನಾನೇ ಆಗಿದ್ದೆ. ಉಚ್ಚನ್ಯಾಯಾಲಯದಿಂದ ಹಿಡಿದ ರಾಜ್ಯದಲ್ಲಿ ನಾವು ಎಲ್ಲೆಲ್ಲಿ ಬೆಂಗಳೂರಿನಂತಹ ನಗರದಲ್ಲಿ ಪ್ರವಾಸ ಮಾಡಿದೆವು, ಇಡೀ ನಗರವೇ ಸ್ವಾಗತಿಸಿದಾಗ ಶ್ರೀಮಾನ್ ಸೂರ್ಯನಾರಾಯಣ್‌ರಾವ್ ರವರ ಸಂಘಟನಾ ಶಕ್ತಿ ಅತ್ಯಂತ ಪ್ರಭಾವಿಯಾಗಿತ್ತು. ಆ ಸಮಯದಲ್ಲಿ ಸಾರ್ವಜನಿಕ ಉದ್ಯಮದ ನೌಕರರು ಮುಷ್ಕರ ಹೂಡಿದರು, ಅವರನ್ನೂ ಕೂಡ ರೈತ ಕಾರ್ಮಿಕರ ಜೊತೆಗೆ ಸೇರಿಸಿ ಬಹುಶಃ ಒಂದು ಇತಿಹಾಸವನ್ನು ಕರ್ನಾಟಕದಲ್ಲಿ ಸೃಷ್ಟಿ ಮಾಡಿ ಬಿಟ್ಟು ಹೋದಂತಹ ಒಬ್ಬ ಮಹಾನ್ ನಾಯಕ, ಅವರ ಅಗಲಿಕೆ ನಮ್ಮೆಲ್ಲರಿಗೂ ಒಬ್ಬ ಹಿರಿಯಣ್ಣನನ್ನು ಮತ್ತು ಹೋರಾಟಗಾರರನ್ನು ಮಾಗದರ್ಶಿಯನ್ನು ನಾವುಗಳು ಕಳೆದುಕೊಂಡ ಹಾಗೆ ಆಗಿದೆ. ಅವರ ಬಗ್ಗೆ ಮಾನ್ಯ ಸಿಂಧ್ಯರವರು ಮತ್ತು ಮಿತ್ರರು ಹೇಳಿದ ಹಾಗೆ ಅವರ ಜಾಗವನ್ನು ತುಂಬುವಂತಹದ್ದು ಅಷ್ಟು ಸುಲಭವಾದ ಕೆಲಸವಲ್ಲ. ಇತ್ತೀಚಿನ ದಿನಗಳಲ್ಲಿ ಕಾರ್ಮಿಕ ನಾಯಕರುಗಳು ಶಾಸನಸಭೆಯನ್ನು ಪ್ರವೇಶ ಮಾಡುವುದು ಬಹಳ ಕಡಿಮೆಯಾಗಿದೆ. ಮಾನ್ಯ ಪ್ರತಿಪಕ್ಷದ ನಾಯಕರೂ ಕೂಡ ಅವರ ಬಗ್ಗೆ ಉಲ್ಲೇಖನವನ್ನು ಸಹ ಮಾಡಿದ್ದರು. ಇದನ್ನು ಗಮನಿಸಬೇಕಾದುದು ನಮ್ಮ ಕರ್ತವ್ಯವೆಂದು ಹೇಳಿ ನಾನು ಭಾವನೆ ಮಾಡುತ್ತೇನೆ.

ಇನ್ನು ಉಳಿದವರ ಬಗ್ಗೆ ಅದರಲ್ಲೂ ವಿಶೇಷವಾಗಿ ಶ್ರೀ ಎಸ್.ಎಲ್. ಶಕ್ದರ್ ರವರು ನಾವೆಲ್ಲರೂ ಸಂಸತ್ತಿನಲ್ಲಿದ್ದಾಗ ಅವರು ತೀರ ಹತ್ತಿರದಿಂದ ಬಲ್ಲವರು, ಅವರು ತಮ್ಮ ಬದುಕನ್ನು ಸಂಸದೀಯ ವ್ಯವಹಾರಗಳ ಜೀವನಕ್ಕಾಗಿಯೇ ಸಮರ್ಪಿಸಿಕೊಂಡಿದ್ದರು ಎಂದು ಹೇಳಿದರೆ ಅದು ಅತಿಶಯೋಕ್ತಿಯೇನಲ್ಲ. ತಾನು ಬಿಟ್ಟುಹೋಗಿರತಕ್ಕಂತಹ ಅತ್ಯಂತ ದೊಡ್ಡ ಆಸ್ತಿ, ಇದು ದೇಶದ ಆಸ್ತಿಯಾಗಿ ಸಂಸತ್ತಿನಲ್ಲಿರಲಿ, ಶಾಸನಸಭೆಯಲ್ಲಿರಲಿ, ಅಥವಾ ಮೇಲ್ಮನೆಯಲ್ಲಿರಲಿ ಇವತ್ತಿನವರೆಗೆ ಕ್ಲಿಷ್ಟವಾದ ಸಮಸ್ಯೆಗಳು ಬಂದಾಗಲೆಲ್ಲಾ ಶಕ್ದಾರ್ ಮತ್ತು ಕೌಲ್ ಜೋಡಿಯವರು ಬರೆದಿರತಕ್ಕಂತಹ ಪುಸ್ತಕವೇ ನಮಗೆ ಆದರ್ಶವಾಗಿ ಕಾಣುತ್ತದೆ. ಅವರು ನಿಧನರಾದರೂ ಸಹ ಅವರು ಬಿಟ್ಟು ಹೋಗಿರತಕ್ಕಂತಹ ಆಸ್ತಿ ಶಾಶ್ವತವಾಗಿ ಈ ಪ್ರಜಾತಂತ್ರ ವ್ಯವಸ್ಥೆಗೆ ಅವರು ಕೊಟ್ಟು ಹೋದಂತಹ ಕೊಡುಗೆ ಎಂದು ಹೇಳಿ ನಾನು ಭಾವನೆ ಮಾಡುತ್ತೇನೆ.

ಇನ್ನು ಪದ್ಮಭೂಷಣ ಪ್ರಶಸ್ತಿ ವಿಜೇತರಾದ ಡಾ|| ವೆಂಕಟಲಕ್ಷ್ಮಮ್ಮನವರು ಬಹಳ ಜನರಿಗೆ ಪರಿಚಯವಿಲ್ಲ. ಅವರು ನಮ್ಮ ಜಿಲ್ಲೆಯವರಾಗಿದ್ದಾರೆ, ಅವರು ಅಪಾರವಾದಂತಹ ಸಂಸ್ಕೃತದ ವಿದ್ವತ್ತನ್ನು ಕಂಡವರು, ಒಳ್ಳೆಯ ನೃತ್ಯಗಾರ್ತಿಯಾಗಿದ್ದರು. ಯಾರಿಗೂ ಗೊತ್ತಿಲ್ಲದ ಹಾಗೆ ಅವರಿಗೆ ಪದ್ಮಭೂಷಣ ಪ್ರಶಸ್ತಿಯು ಬಂತು. ಅವರು ಕಡೂರು ತಾಲ್ಲೂಕು ತಂಗಲಿತಾಂಡ್ಯದಿಂದ ಬಂದವರಾಗಿದ್ದರು. ಈಗ ಆ ತಾಂಡ್ಯಕ್ಕೆ ಡಾ|| ವೆಂಕಟಲಕ್ಷ್ಮಮ್ಮನವರ ಹೆಸರನ್ನೇ ಇಟ್ಟಿದ್ದೇವೆ. ಅದರ ಬಗ್ಗೆ ನಾವು ಇನ್ನೂ ಪರಿವರ್ತನೆ ಮಾಡಬೇಕಾದುದು ಇದೆ. ಶ್ರದ್ಧೆ ಮತ್ತು ಸಾಧನೆ, ಶ್ರದ್ಧೆಯಿಂದ ಅವರು ಮಾಡಿದಂತಹ ಸಾಧನೆ, ಮೈಸೂರು ಮಹಾರಾಜರ ಅಸ್ಥಾನದಲ್ಲಿ ಅವರು ಒಬ್ಬ ಪ್ರತಿಷ್ಠಿತ, ಅನುಪಮವಾದಂತಹ ನೃತ್ಯ ಕಲಾವಿದೆಯಾಗಿದ್ದರು.

ರಾಷ್ಟ್ರಪ್ರಶಸ್ತಿಯ ಬಂದಿರತಕ್ಕಂತಹವರನ್ನು ನೆನಸಿಕೊಳ್ಳುವುದು ನಮ್ಮ ಅದ್ಯಕರ್ತವ್ಯವಾಗಿದೆ. ಅವರು ನಮ್ಮ ರಾಜ್ಯಕ್ಕೆ ಸಂಗೀತ ಮತ್ತು ನೃತ್ಯ ಕ್ಷೇತ್ರಕ್ಕೆ ಕೊಟ್ಟಿರತಕ್ಕಂತಹ ಕೊಡುಗೆ ಸದಾ ನಮ್ಮ ನೆನಪಿನಲ್ಲಿ ಉಳಿಯುತ್ತದೆ. ಇವರುಗಳೆಲ್ಲರ ಕುಟುಂಬಕ್ಕೆ ನಾನು ನನ್ನ ವತಿಯಿಂದ, ತಮ್ಮ ವತಿಯಿಂದ ಸದನದ ಹಿರಿಯ ಮುಖಂಡರು ವ್ಯಕ್ತಪಡಿಸಿದಂತಹ ಅಭಿಪ್ರಾಯಕ್ಕೆ ನನ್ನ ಸಹಮತವನ್ನು ಹಾಗೂ ನನ್ನ ಧ್ವನಿಯನ್ನು ಸೇರಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

+**ಶ್ರೀ ಗುಂಡಪ್ಪ ವಕೀಲ್ (ಔರಾದ್).**- ಸನ್ಮಾನ್ಯ ಅಧ್ಯಕ್ಷರೆ, ತಾವು ಸೂಚಿಸಿರತಕ್ಕಂತಹ ಸಂತಾಪ ಸೂಚನೆಗೆ ನನ್ನ ಬೆಂಬಲವನ್ನು ವ್ಯಕ್ತಪಡಿಸುತ್ತಾ, ಸನ್ಮಾನ್ಯ ಶ್ರೀ ಬಿ.ಡಿ. ಜತ್ತಿಯವರು ತಮ್ಮ ಗರಿಷ್ಠ ಸಂಬಂಧಿಕರನ್ನು ಬೀದರ್ ಜಿಲ್ಲೆಯಲ್ಲಿ ಹಾಗೂ ನನ್ನ ಕ್ಷೇತ್ರದಲ್ಲಿ ಹೊಂದಿದ್ದರು. ಅದೇ ರೀತಿಯಾಗಿ ರಾಷ್ಟ್ರೀಯ ಬಸವ ದಳದಲ್ಲಿ ಅವರು ಕಾರ್ಯಾಧ್ಯಕ್ಷರಾಗಿ ಕೆಲಸ ಮಾಡುತ್ತಿರುವಾಗ ಬಸವತತ್ವದ ಪ್ರಚಾರಕ್ಕಾಗಿ ನಾನಾ ರೀತಿಯ ಕಾರ್ಯಕ್ರಮಗಳಲ್ಲಿ, ಕಾರ್ಯ ಚಟುವಟಿಕೆಗಳಲ್ಲಿ ಅವರ ಜೊತೆಗೆ ನಾನು ಕಳೆದ 15 ವರ್ಷಗಳಿಂದ ಭಾಗವಹಿಸಿರುವುದರ ಸಲುವಾಗಿ ಅಂತಹವರ ವ್ಯಕ್ತಿತ್ವದ ಕಿರು ಪರಿಚಯ ನನಗೆ ಇದೆ. ಶ್ರೀಮಾನ್ ಬಿ.ಡಿ. ಜತ್ತಿಯವರು ಸಂತರು, ವಿಭೂತಿಪುರುಷರು, ಸಮಾಜದ ಬಗ್ಗೆ ಕಳಕಳಿಯನ್ನು ಹೊಂದಿರತಕ್ಕಂತಹ ಸತ್ಪುರುಷರಾಗಿ ಬಾಳಿರತಕ್ಕಂತಹ ವ್ಯಕ್ತಿ, ಅಂತಹವರನ್ನು ಕಳೆದುಕೊಂಡು, ಇವತ್ತು ಸಮಾಜ ತುಂಬಾ ನಷ್ಟವನ್ನು ಅನುಭವಿಸುತ್ತಿದೆ. ಅವರು ಒಂದು ದಿವಸ ಮಾತನಾಡುತ್ತಾ, ನಾವು ಮೀನಿನ ಜೀವನವನ್ನು ಬಾಳಬೇಕೆಂದು ಹೇಳಿದರು. ನಾವೆಲ್ಲರೂ ಮೀನುಗಳನ್ನು ನೋಡಿದ್ದೇವೆ, ಸಮುದ್ರದಲ್ಲಿ ಮೀನು, ಅದು ಜೀವನ ಹೇಗೆ ಬಾಳುತ್ತದೆಂದರೆ, ಮೀನಿಗೆ ಇರತಕ್ಕಂಥದ್ದು ಒಂದೇ ಒಂದು ಆಸೆ. ಆ ಆಸೆ ಏನೆಂದರೆ, ಸಮುದ್ರದಲ್ಲಿ ಹರಿಯುತ್ತಿರಬೇಕು. ಎಲ್ಲಿಯವರೆವಿಗೆ ಹರಿಯುತ್ತಿರಬೇಕೆಂದರೆ, ದಡ ಎಂದೂ ಸಿಗಬಾರದು, ಆ ರೀತಿಯಾಗಿ ಸಮುದ್ರದಲ್ಲಿ ಹರಿಯುತ್ತಿರಬೇಕು. ಈ ರೀತಿಯಾಗಿ ನಾವು ಜೀವನವನ್ನು ಬಾಳಬೇಕು. ಅಂತಹ ಒಂದು ಮಾರ್ಮಿಕವಾದಂತಹ ಮಾತನ್ನು ಅವರು ಹೇಳಿದ್ದಾರೆ. ಮನುಷ್ಯ ತನ್ನ ಜೀವನವನ್ನು ಹರಿಸುತ್ತಿರಬೇಕು, ನಾವು ನಮ್ಮ ವಿಚಾರವನ್ನು ಅರಸುತ್ತಿರಬೇಕು, ಯಾವುದೇ ಒಂದು ಸಂಕುಚಿತ ವಿಷಯಕ್ಕೆ ನಮ್ಮ ವಿಚಾರಗಳನ್ನು ಕಟ್ಟಿ ಹತ್ತಬಾರದು. ಇಡೀ ದೇಶದಲ್ಲಿ ನಮ್ಮ ವಿಚಾರವು ಹರಿಯುತ್ತಿರಬೇಕು. ನಮಗೆ ವಿಶ್ವದ ದರ್ಶನವಾಗಬೇಕು, ಈ ರೀತಿಯಾಗಿ ನಾವು ಜೀವನವನ್ನು ಬಾಳಬೇಕು, ಮೀನಿನ ಜೀವನವನ್ನು ನಾವು ಬಾಳಬೇಕೆಂದು ಎಂಬ ಕಿವಿಮಾತನ್ನು ಅವರು ನಮಗೆ ಹೇಳಿದ್ದರು. ಆ ಒಂದು ವಿಚಾರವನ್ನು ನಾವು ನೆನೆಸಿಕೊಂಡರೆ, ಅವರ ವಿಚಾರಗಳು ಎಂತಹ ಮಹತ್ವದ ವಿಚಾರಗಳು ಅವರು ಈಗ ಇಲ್ಲ, ಅವರು ಆಡಿರತಕ್ಕಂತಹ, ವಿಚಾರಗಳು ನಮ್ಮ ಮುಂದೆ ಇದೆ. ನಾವುಗಳು ಅದನ್ನು ಮೆಲುಕು ಹಾಕುತ್ತಾ ಈ ಜೀವನವನ್ನು ನಾವು ಸಾಧಿಸಿದರೆ ನಮಗೆ ಬಹಳ ಉಪಯುಕ್ತವಾಗಿರತಕ್ಕಂಥದ್ದು ಆಗುತ್ತದೆ. ಈ ವಿಚಾರವನ್ನು ಈ ರೀತಿಯಾಗಿ ಅದು ನಮಗೆ ಸಹಾಯವಾಗುತ್ತದೆ ಎಂಬ ಮಾತನ್ನು ನಾವುಗಳು ನೆನೆಸಿಕೊಳ್ಳಬಹುದು. "ಸಂಸಾರವೆಂಬುದೊಂದು ಗಾಳಿಯ ಸೊಡರು ಕಂಡಯ್ಯ" ಎಂದು ಅವರು ಒಂದು ಸಲ ಹೇಳಿದರು. "ಸಿರಿ ಎಂಬುದೊಂದು ಸಂತೆಯ ಮಂದಿ ನೋಡಯ್ಯಾ" ಇವೆರಡು ಮಾತುಗಳು ಎಷ್ಟು ಅರ್ಥಗರ್ಭಿತವಾದ ಮಾತುಗಳು. ಸಂಸಾರ ಎಂದರೆ ಆಯುಷ್ಯ, ಸೊಡರು ಎಂದರೆ ದೀಪ. ಸಂಸಾರವೆಂಬುದೊಂದು ಗಾಳಿಯ ಸೊಡರು ಎಂದರೆ ನಮ್ಮ

ಆಯುಷ್ಯ ಗಾಳಿಯಲ್ಲಿ ಇಟ್ಟಿರತಕ್ಕಂಥ ದೀಪ. ಎಣ್ಣೆ ಬೇಕಾದಷ್ಟು ಇರಬಹುದು, ಬತ್ತಿ ಉದ್ದ ಇರಬಹುದು, ಹಣತೆ ಗಟ್ಟಿ ಇರಬಹುದು. ಆದರೆ, ಸ್ವಲ್ಪ ಜೋರಾಗಿ ಗಾಳಿ ಬೀಸಿದರೆ ಆ ದೀಪ ಆರಿ ಹೋಗಿ ಬಿಡುತ್ತದೆ. ಅಂದರೆ ನಾವು ಬದುಕಿದಷ್ಟು ದಿವಸ ಸಾರಗರ್ಭಿತವಾಗಿ ಬದುಕಬೇಕು ಎನ್ನುವ ಕಿವಿ ಮಾತನ್ನು ನನ್ನ ಎದುರಿಗೆ ಮತ್ತು ಬಹಳಷ್ಟು ಜನರ ಎದುರಿಗೆ ಇಂಥ ಅನೇಕ ಅನುಭವದ ಮಾತುಗಳನ್ನು ಅವರು ಹೇಳಿದ್ದಾರೆ. ಅವರು ಈಗ ಇಲ್ಲ. ಆದರೂ ಅವರು ಹೇಳಿರತಕ್ಕಂಥ ಮಾತುಗಳು ಇವೆ. ಅರ್ಥಗರ್ಭಿತವಾದಂಥ ಇಂಥ ಮಾತುಗಳನ್ನು ನಾವು ಮೆಲುಕು ಹಾಕಬೇಕು, ಮೆಲುಕು ಹಾಕುತ್ತಾ ಬಾಳಬೇಕು. ಅದೇ ರೀತಿಯಾಗಿ, ಮತ್ತೊಂದು ಮಾತನ್ನು ಕೂಡ ಅವರು ಹೇಳಿದ್ದರು. ಹಿಂದೆ ಗುರುಕುಲಗಳಲ್ಲಿ ವಿದ್ಯಾರ್ಥಿಗಳು ಅಭ್ಯಾಸ ಮಾಡಿ ಮನೆಗೆ ಹೋಗುವಾಗ, ಗುರುಗಳಿಗೆ ದಕ್ಷಿಣೆ ಕೊಟ್ಟು ಆರ್ಶೀವಾದ ಮಾಡಿ ಎಂದರೆ ಆ ಗುರುಗಳು, ಶಕ್ತಿಶಾಲೀಭವ, ಬುದ್ಧಿಶಾಲೀಭವ, ಹೃದಯಶಾಲೀಭವ ಎಂದು ಆಶೀರ್ವಾದ ಮಾಡುತ್ತಿದ್ದರಂತೆ. ಆ ರೀತಿಯಾಗಿ ನಾವು ಬಾಳಬೇಕು ಎನ್ನುವ ಮಾರ್ಮಿಕವಾದ ಮಾತನ್ನು ಹೇಳಿದ್ದಾರೆ. ಈ ಮೂರು ಶಬ್ದಗಳಲ್ಲಿ ಇಡೀ ಸಂಸಾರದ ಸಾರವಡಗಿದೆ. ಶಕ್ತಿಶಾಲೀಭವ ಎಂದರೆ ಮಾನವರಾದ ನಾವುಗಳು ಶಕ್ತಿಶಾಲಿಯಾಗಿ ಬಾಳಿ, ಶಕ್ತಿಶಾಲಿಯಾಗಿರತಕ್ಕಂಥ ಸಮಾಜವನ್ನು ಕಟ್ಟಬೇಕು. ಅಂಥ ಶಕ್ತಿಯನ್ನು ಬುದ್ಧಿಯ ಅಧೀನದಲ್ಲಿಟ್ಟುಕೊಂಡು ನಾವು ಬಾಳಬೇಕು. ಈ ಶಕ್ತಿ ಮತ್ತು ಬುದ್ಧಿಯನ್ನು ನಾವು ಹೃದಯವಂತಿಕೆಯಿಂದ ಬೆಳೆಸಬೇಕು ಎನ್ನುವ ಮಾತನ್ನು ಬಹಳ ಸಾರಗರ್ಭಿತವಾಗಿ ಅವರು ಹೇಳಿದ್ದಾರೆ. ಮೊಟ್ಟ ಮೊದಲನೆ ಬಾರಿಗೆ ನಾನು ಕರ್ನಾಟಕ ವಿಧಾನಸಭೆಯ ಸದಸ್ಯನಾಗಿ ಆರಿಸಿ ಬಂದಾಗ, ಅವರ ಆರ್ಶೀವಾದ ಪಡೆಯಲು ಅವರ ಮನೆಗೆ ಹೋದಾಗ ಅವರು ನನಗೆ ಒಂದು ಕಿವಿಮಾತನ್ನು ಹೇಳಿದರು. ಅಧಿಕಾರದಲ್ಲಿ ನಾವು ಯಾವ ರೀತಿ ಇರಬೇಕು, ನಮಗೂ ಸಮಾಜಕ್ಕೂ ಯಾವ ರೀತಿಯ ಸಂಬಂಧವಿರಬೇಕು ಎನ್ನುವ ಮಾತನ್ನು ಹೇಳುತ್ತಾ ಒಂದು ಉದಾಹರಣೆಯನ್ನು ಕೊಟ್ಟರು. ನಮ್ಮ ಕೈಗೆ ಪೆಟ್ಟು ಬಿದ್ದರೆ ಕಣ್ಣಿನಲ್ಲಿ ನೀರು ಬರುತ್ತದೆ. ಹಾಗಾದರೆ ಕೈಗೂ ಕಣ್ಣಿಗೂ ಇರುವ ಸಂಬಂಧವೇನು? ಹಾಗೆಯೇ ಕಣ್ಣಿನಿಂದ ಬಂದಂಥ ನೀರನ್ನು ಕೈ ತಾನು ಮೇಲೆದ್ದು ಕಣ್ಣಿನ ನೀರನ್ನು ಒರೆಸುತ್ತದೆ. ಕೈಗೆ ಪೆಟ್ಟಾದರೆ ಕಣ್ಣಿನಲ್ಲಿ ನೀರು ಬರುತ್ತದೆ, ಕಣ್ಣಿನಲ್ಲಿ ನೀರು ಬಂದರೆ ಕೈ ಅದನ್ನು ಒರೆಸುತ್ತದೆ. ಇದು ಯಾವ ರೀತಿಯ ಸಂಬಂಧ? ಏನು ಅನುಬಂಧ? ಈ ರೀತಿ ಮಾರ್ಮಿಕವಾಗಿ ನೀನು ವಿಧಾನಸಭೆಯಲ್ಲಿ ಕೆಲಸ ಮಾಡಬೇಕು ಎನ್ನುವ ಮಾತನ್ನು ಅವರು ನನಗೆ ಹೇಳಿದ್ದಾರೆ. ಸಮಾಜ ಮತ್ತು ಅಧಿಕಾರದಲ್ಲಿರುವವರ ಮಧ್ಯೆ ಕೈ ಮತ್ತು ಕಣ್ಣಿನ ಸಂಬಂಧ ಉಂಟು. ಇದನ್ನು ನೀನು ಅರ್ಥ ಮಾಡಿಕೊಂಡು ಬಾಳು ಎನ್ನುವ ಆಶೀರ್ವಾದವನ್ನು ನನಗೆ ಮಾಡಿದ್ದಾರೆ. ಈ ರೀತಿ ಮಾರ್ಮಿಕವಾದ ವಿಚಾರಗಳನ್ನಿಟ್ಟುಕೊಂಡು, ತಾತ್ವಿಕವಾಗಿ ಜೀವನವನ್ನು ನಡೆಸಿ, ಸಾರಗರ್ಭಿತವಾಗಿ ತಮ್ಮ ಸಂಸಾರದ ಈ ದೋಣಿಯನ್ನು ಸಾಗಿಸಿರತಕ್ಕಂಥ ಮಹಾನ್ ವ್ಯಕ್ತಿಗಳು ಬಿ.ಡಿ. ಜತ್ತಿಯವರು. ಅಂಥವರಿಗೆ ಈ ಸದನದಲ್ಲಿ ಶ್ರದ್ಧಾಂಜಲಿಯನ್ನು ಅರ್ಪಿಸುವುದರ ಮೂಲಕ, ದೇವರು ಅವರಿಗೆ ಸ್ವರ್ಗದಲ್ಲಿ ಆಶೀರ್ವಾದ ಮಾಡಿ, ಸ್ವರ್ಗದಲ್ಲಿ ಆಸನವನ್ನು ಕೊಡಲಿ ಎಂದು ಹೇಳಿ, ತಾವು ನನಗೆ ಮಾತನಾಡಲು ಅವಕಾಶವನ್ನು ಕೊಟ್ಟಿದ್ದಕ್ಕಾಗಿ ತಮಗೆ ಆಭಾರಿಯಾದ ನಮನವನ್ನು ಸಲ್ಲಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

+ಶ್ರೀ ಪಿ.ಹೆಚ್. ಪೂಜಾರ್ (ಬಾಗಲಕೋಟೆ).- ಸನ್ಮಾನ್ಯ ಅಧ್ಯಕ್ಷರೇ, ಶ್ರೀ ಬಿ.ಡಿ. ಜತ್ತಿ ಯವರು ನಮ್ಮ ಜಿಲ್ಲೆಯವರು. ನಮ್ಮ ಬಾಗಲಕೋಟೆ ಜಿಲ್ಲೆಯ ಜಮಖಂಡಿ ತಾಲ್ಲೂಕಿನ ಸಾವಳಗಿಯ ಒಂದು ಬಡ ಕುಟುಂಬದಿಂದ ಬಂದವರು ಎಂದು ಹೇಳಲಿಕ್ಕೆ ನನಗೆ ಬಹಳ ಹೆಮ್ಮೆ ಎನ್ನಿಸುತ್ತಿದೆ. ಮಾನ್ಯ ಬಿ.ಡಿ. ಜತ್ತಿಯವರು ಒಬ್ಬ ಸಾಮಾನ್ಯ ರೈತನ ಮಗನಾಗಿ ದೇಶದ ಉನ್ನತ ಪದವಿಯವರೆಗೆ ಕ್ರಮಿಸಿದಂಥ ಹಾದಿ ಅಷ್ಟೇನೂ ಸುಗಮವಾಗಿರಲಿಲ್ಲ. ನಾಲ್ಕೈದು ಸಾರಿ ಅವರನ್ನು ಭೇಟಿಯಾಗುವಂಥ ಸದವಕಾಶ ನನಗೆ ಸಿಕ್ಕಿತ್ತು. ಹೀಗೆ ಸಿಕ್ಕಿದಂಥ ಸಂದರ್ಭಗಳಲ್ಲಿ ಅವರು ಒಬ್ಬ ಸಮಾಜ ಸುಧಾರಕರಾಗಿ, ರಾಜಕೀಯವನ್ನು ಯಾವ ರೀತಿ ಸ್ವಚ್ಛವಾಗಿ, ನಿರ್ವಿಕಾರ ಭಾವದಿಂದ, ಇದ್ದದ್ದನ್ನು ಇದ್ದಂತೆಯೇ ಸ್ವೀಕರಿಸುವ ದಾರ್ಶನಿಕ ಮನೋಭಾವದಿಂದ ನಾವು ನೋಡಿಕೊಂಡು ಹೋಗಬೇಕು ಎನ್ನುವ ಉದಾತ್ತ ವಿಚಾರಗಳನ್ನು ನನ್ನ ಮುಂದೆ ಹೇಳುತ್ತಿದ್ದರು. ಅವರು ಬಸವಣ್ಣನವರ ತತ್ವಗಳ ಅಕ್ಷರಶಃ ಪಾಲಕರಾಗಿ, ಸಮಕಾಲೀನ ಜಗತ್ತಿನ ಓರೆಕೋರೆಗಳನ್ನು ಯಾವ ರೀತಿ ತಿದ್ದಬಹುದು, ಮಾನವರೆಲ್ಲರೂ ಒಂದೇ ಎನ್ನುವಂಥ ಒಂದು ದೃಷ್ಟಿಕೋನವನ್ನಿಟ್ಟುಕೊಂಡು, ಮೇಲುಕೀಳು ಎನ್ನುವಂಥ ದುಷ್ಟ ವಿಚಾರವನ್ನು, ಅನಿಷ್ಟ ಪದ್ಧತಿಗಳನ್ನು ಆಚರಣೆಗೆ ತರದೇ, ಸಮಾಜದಲ್ಲಿ ಪ್ರತಿಯೊಬ್ಬ ವ್ಯಕ್ತಿಯೂ ಕೂಡ ಸರಿಸಮಾನವಾಗಿ ಬದುಕುವ ಚಿಂತನೆಗೆ ಅವಕಾಶವಿದೆ, ಹಾಗೆ ಬದುಕುವಂಥದಕ್ಕೆ ಗೌರವವಿದೆ, ವೈಚಾರಿಕ ಸ್ವಾತಂತ್ರ್ಯವಿದೆ ಎನ್ನುವಂಥ ಸ್ಪಷ್ಟವಾದಂಥ ಅಭಿಪ್ರಾಯವನ್ನು ಅವರು ಹೊಂದಿದ್ದರು. ಈ ಹಿನ್ನೆಲೆಯಲ್ಲಿ, ಭೂ ಸುಧಾರಣಾ ವ್ಯವಸ್ಥೆಯಲ್ಲಿ, ಇಂದು ಉಳುವವನೇ ಭೂಮಿಯ ಒಡೆಯ ಎಂದು ನಾವು ಏನು ಜಾರಿಯಲ್ಲಿ ತಂದಿದ್ದೇವೆ, ಈ ವೈಚಾರಿಕ ಆಂದೋಲನದ ಕೆಲವೇ ಹರಿಕಾರರಲ್ಲಿ ಅವರೂ ಕೂಡ ಒಬ್ಬರಾಗಿದ್ದರು ಎಂದು ಹೇಳಲು ನನಗೆ ಅವರ ಬಗ್ಗೆ ಇನ್ನೂ ಹೆಚ್ಚು ಹೆಮ್ಮೆ ಎನಿಸುತ್ತದೆ. ಸರ್ವಕಾಲಿಕ ಸಮಾಜ ಸುಧಾಕರ ಬಸವಣ್ಣನವರ ಕುರಿತಂತೆ ಅವರು ಅನೇಕ ಕೇಂದ್ರಗಳನ್ನು ಸ್ಥಾಪಿಸಿದರು. ಅಂತರ್ ರಾಷ್ಟ್ರೀಯ ಮಟ್ಟದಲ್ಲೂ ಕೂಡ ಬಸವ ಕೇಂದ್ರಗಳ ಸ್ಥಾಪನೆಗೆ ಅವರು ಮೊದಲಿಗರಾದರು. ಜೀವನದುದ್ದಕ್ಕೂ ಸ್ಥಿತಪ್ರಜ್ಞರಾಗಿ, ನಿರ್ವಿಕಾರ ಮನೋಭಾವದಿಂದ ಸಜ್ಜನಿಕೆಯ ಸಾಕಾರ ಮೂರ್ತಿಗಳಾಗಿ ನಮಗೆಲ್ಲರಿಗೂ, ನಾನು ರಾಜಕೀಯದಲ್ಲಿ ಇರಬಹುದು, ಇಲ್ಲದೇ ಇರಬಹುದು, ಪ್ರತಿಯೊಬ್ಬ ಸಮಾಜ ಸೇವಕರಿಗೆ ಒಳ್ಳೆಯ ಮಾರ್ಗದರ್ಶಿಯಾಗಿ ಕಾಣುವಂಥ ಒಂದು ಪಡಿಯಚ್ಚನ್ನು ಅವರು ಬಿಟ್ಟು ಹೋಗಿದ್ದಾರೆ. ಅವರ ನಿಧನದಿಂದ ಕೇವಲ ನನ್ನ ಜಿಲ್ಲೆಯಷ್ಟೇ ಅಲ್ಲ, ಕೇವಲ ಕರ್ನಾಟಕ ಮಾತ್ರವಲ್ಲ, ಇಡೀ ಭರತಖಂಡ ಒಬ್ಬ ಸಮಾಜ ಸುಧಾರಕ, ನಾಡಿನ ಸಂಸ್ಕೃತಿಯ ಹರಿಕಾರರನ್ನು ಕಳೆದುಕೊಂಡಂತಾಗಿದೆ ಎನ್ನುವ ವಿಚಾರವನ್ನು ಹೇಳುತ್ತಾ, ಈ ಪ್ರಸ್ತಾವಕ್ಕೆ ನಾನು ಕೂಡ ಅನುಮೋದನೆ ನೀಡುತ್ತಿದ್ದೇನೆ.

+ಶ್ರೀ ಕೆ. ಶ್ರೀನಿವಾಸಗೌಡ (ಕೋಲಾರ).- ಮಾನ್ಯ ಅಧ್ಯಕ್ಷರೇ, ಶ್ರೀ ಬಸಪ್ಪ ದಾನಪ್ಪ ಜತ್ತಿಯವರ ನಿಧನದಿಂದ ನಮ್ಮ ರಾಜ್ಯಕ್ಕೆ ಮತ್ತು ರಾಷ್ಟ್ರಕ್ಕೆ ಅಪಾರವಾದಂಥ ನಷ್ಟವಾಗಿದೆ. ಬಹಳ ಜನ ನಾಯಕರುಗಳು, ವಿರೋಧ ಪಕ್ಷದ ನಾಯಕರುಗಳು ಮತ್ತು ನಮ್ಮ ಪಕ್ಷದ ನಾಯಕರುಗಳು ಇವರ ವಿಷಯದಲ್ಲಿ ಹೆಚ್ಚಿಗೆ ಬೆಳಕು ಚೆಲ್ಲಿರುವುದರಿಂದ, ನಾನು ನೆನೆಸಿಕೊಳ್ಳುವಂಥ ಎರಡು ಘಟನೆಗಳನ್ನು ಹೇಳುತ್ತೇನೆ. 1959-60ನೇ ಇಸವಿಯಲ್ಲಿ ನಾನು ಮಿಡ್ಲ್ ಸ್ಕೂಲಿನಲ್ಲಿ ಓದುತ್ತಿದ್ದಂಥ ಸಮಯದಲ್ಲಿ, ನಮ್ಮ ಹಳ್ಳಿಯ ಪಕ್ಕದಲ್ಲಿ ಜೋಡಿ ಗ್ರಾಮ ಇತ್ತು. ಅವರು ಆ ಗ್ರಾಮಕ್ಕೆ

ಬಂದಿದ್ದರು. ಆಗ ನಾನು ಇನ್ನೂ ಹುಡುಗನಾಗಿದ್ದೆ, ಮುಖ್ಯಮಂತ್ರಿಗಳು ಬಂದಿದ್ದಾರೆ ಎಂದು ನಾನು ಅಲ್ಲಿಗೆ ಹೋಗಿ ನಿಂತುಕೊಂಡಾಗ, ಅದೇ ಊರಿನಲ್ಲಿ ಜೋಡಿದಾರರು ಅಲ್ಲಿದ್ದರೂ ಕೂಡ, ನನ್ನ ಮನಸ್ಸಿನ ಮೇಲೆ ಪ್ರಭಾವ ಬೀರಿದ ಅಂಶವೆಂದರೆ ಅವರು ಅವತ್ತು ಒಬ್ಬ ಮುಖ್ಯಮಂತ್ರಿಯಂತೆ ಇರದೆ, ಒಬ್ಬ ಸಾಮಾನ್ಯ ಉಳುವವನ ಪರವಾಗಿ ಮಾತನಾಡಿದಂಥ ಜತ್ತಿಯವರನ್ನು ಸ್ಮರಿಸುವಂಥ ಕೆಲಸ ಇವತ್ತು ನಿಜವಾಗಿಯೂ ಕೂಡ ಆಗಬೇಕಾಗಿದೆ.

12.40 ಪಿ.ಎಂ.

ಅವರು ಗ್ರಾಮ ಪಂಚಾಯತಿ ಅಧ್ಯಕ್ಷರಿಂದ ಹಿಡಿದು ರಾಷ್ಟ್ರಪತಿ ಸ್ಥಾನದವರೆಗೆ ಹೋದಂಥ, ಆ ಮಟ್ಟಕ್ಕೆ ಏರಿದಂಥ ಮಹಾನುಭಾವರು ಅದರ ಜೊತೆಗೆ ಅವರು ಬಹಳ ಸರಳ ಜೀವಿ. ನನ್ನ ಸ್ನೇಹಿತರೊಬ್ಬರು ಹಿಂದೆ ಇಂಜನಿಯರಿಂಗ್ ಕಾಲೇಜನಲ್ಲಿ ಓದುತ್ತಿದ್ದರು. ಅವರು ಬಹಳ, ಬಹಳ ಹಿಂದೆ ನನಗೆ ಹೇಳಿದಂಥ ಮಾತು ಇವತ್ತು ನನ್ನ ಜ್ಞಾಪಕಕ್ಕೆ ಬರುತ್ತಿದೆ. ಅದೇನೆಂದರೆ, ಶ್ರೀಮಾನ್ ಬಿ.ಡಿ. ಜತ್ತಿ ಯವರು ಪಾಂಡಿಚೆರಿಯಲ್ಲಿ ಲೆಫ್ಟಿನೆಂಟ್ ಗವರ್ನರ್ ಆಗಿದ್ದರು. ಈ ವಿದ್ಯಾರ್ಥಿಗಳು ಅವರನ್ನು ನೋಡುವುದಕ್ಕೆ ಅಪಾಯಿಂಟ್‌ಮೆಂಟ್ ತೆಗೆದುಕೊಂಡು ಅವರ ಬಂಗಲೆಗೆ ಬೆಳಿಗ್ಗೆ ಏಳೂವರೆ ಗಂಟೆಗೆ ಹೋದರಂತೆ. ಮಾನ್ಯ ಜತ್ತಿಯವರು ಬೆಳಿಗ್ಗೆ ಎದ್ದು ನಿಕ್ಕರು ಹಾಕಿಕೊಂಡು ಮನೆಯ ಅಂಗಳದಲ್ಲಿ ಇದ್ದಂಥ ಎಲ್ಲಾ ಹೂವಿನ ಗಿಡಗಳಿಗೆ ನೀರನ್ನು ಹಾಕುತ್ತಿದ್ದರಂತೆ. ಹುಡುಗರು ಅಲ್ಲಿಗೆ ಹೋದವರು ಇವರನ್ನು ನೋಡಿ ಬಹುಶಃ ಕೆಲಸದವರು ಇರಬಹುದೆಂದು ತಿಳಿದುಕೊಂಡು 'ಇದ್ದಾರೇನಯ್ಯ ನಮ್ಮ ಜತ್ತಿಯವರು' ಎಂದು ಆ ಜತ್ತಿಯವರನ್ನೇ ಪ್ರಶ್ನೆ ಮಾಡಿದರಂತೆ. ಆಗ ಮಾನ್ಯ ಜತ್ತಿಯವರೇ 'ಇದ್ದಾರೆ ಸರ್, ಅಲ್ಲಿ ಹೋಗಿ ಕುಳಿತುಕೊಳ್ಳಿ' ಅವರನ್ನು ಬಾ ಎಂದು ಹೇಳುತ್ತೇನೆಂದು ಹೇಳಿ, ನಂತರ ಅವರು ಒಳಗಡೆ ಹೋಗಿ ಪಂಚೆ ಉಟ್ಟುಕೊಂಡು ಟೋಪಿ ಹಾಕಿಕೊಂಡು ಬಂದಾಗ ಆ ವಿದ್ಯಾರ್ಥಿಗಳಿಗೆ ಗಾಬರಿ, ಭಯ, ಆಶ್ಚರ್ಯವಾಯಿತು ಎಂದು ಹೇಳಿದರು. ಎಷ್ಟು ಸರಳಜೀವಿ ಎಂದರೆ ಒಬ್ಬ ಮುಖ್ಯಮಂತ್ರಿಯಾಗಿದ್ದಂಥವರು, ಲೆಫ್ಟಿನೆಂಟ್ ಗವರ್ನರ್ ಆಗಿರುವವರು ಸ್ವತಃ ಅವರ ಬಂಗಲೆ ಮುಂದೆ ಅವರೇ ನೀರು ಹಾಕುತ್ತಿದ್ದಾರೆ ಎಂದು ಆ ಹುಡುಗರು ಹೇಳಿದ್ದು ಕೇಳಿದಾಗ, ಅವರು ಎಷ್ಟೊಂದು ಸರಳಜೀವಿ ಎಂದು ಈಗಲೂ ನನಗೆ ಜ್ಞಾಪಕಕ್ಕೆ ಬರುತ್ತಿದೆ. ಅಷ್ಟು ಸರಳಜೀವನವನ್ನು ನಡೆಸಿದಂಥ ಮಾನ್ಯ ಜತ್ತಿಯವರು ಇವತ್ತು ನಮ್ಮನ್ನು ಆಗಲಿದ್ದಾರೆ. ಅದರ ಜೊತೆಗೆ, ಮುಖ್ಯಮಂತ್ರಿಯಾಗಿ ಮತ್ತು ಸಾಮಾನ್ಯ ಮಂತ್ರಿಯಾಗಿ ಕೂಡ ಅವರು ಕೆಲಸ ಮಾಡಿರುತ್ತಾರೆ. ಕೇವಲ ಪೋರ್ಟ್‌ಫೋಲಿಯೋ ಚೇಂಜ್ ಆದರೆ ಸಾಕು ಅದಕ್ಕೆ ದೊಡ್ಡ ರಾದ್ಧಾಂತ ಮಾಡುವವರು ಎಲ್ಲಾ ಸರ್ಕಾರಗಳಲ್ಲಿಯೂ ಇದ್ದಾರೆ. ಬರೀ ಈ ಸರ್ಕಾರದಲ್ಲಿ ಮಾತ್ರ ಇದ್ದಾರೆಂದು ಹೇಳಲಿಲ್ಲ. ಎಲ್ಲಾ ಸರ್ಕಾರಗಳಲ್ಲೂ ಇದ್ದಾರೆ. ಆದರೆ ಇವರು ಮುಖ್ಯಮಂತ್ರಿಯಾದಂಥವರು ಕೇವಲ ಒಬ್ಬ ಮಂತ್ರಿಯಾಗಿ ಕೂಡ ಒಬ್ಬ ಮುಖ್ಯಮಂತ್ರಿಗಳ ಕೈಕೆಳಗೆ ಕೆಲಸ ಮಾಡುವಂಥ ಮಾನ್ಯ ಜತ್ತಿಯವರನ್ನು ನೋಡಿದಾಗ ಅದು ಅವರ ಸರಳ ಸಜ್ಜನಿಕೆಗೆ ಹೆಸರು ಆಗಿದೆ ಎನ್ನುವಂಥ ಮಾತನ್ನು ಈ ಸಮಯದಲ್ಲಿ ಹೇಳಿ, ಇನ್ನು ಶ್ರೀ ಸೂರ್ಯನಾರಾಯಣರಾವ್-'ಸೂರಿ' ಅವರು ಕಮ್ಯುನಿಸ್ಟ್ ಪಾರ್ಟಿಯಿಂದ ಬಂದಂಥವರು. ಅವರ ಜೊತೆಯಲ್ಲಿ ನಾನೂ ಕೂಡ ಕೆಲವು ದಿವಸ ಕೆಲಸ ಮಾಡಿದ್ದೇನೆ. ರೈತ ಸಂಘದಲ್ಲಿ ಶ್ರೀ ಭೈರೇಗೌಡರ ಜೊತೆ ಅವರು ಹೇಗೆ ಕೆಲಸ ಮಾಡಿದರೋ

ಹಾಗೆ ನಾನೂ ಕೂಡ ರೈತ ಸಂಘದಲ್ಲಿ ಕೆಲಸ ಮಾಡಿ ಅವರ ಜೊತೆ ನಿಕಟ ಸಂಪರ್ಕ ಹೊಂದಿದ್ದೆ. ಯಾರಾದರೂ ಕಾರ್ಮಿಕರಿಗೆ ಸಣ್ಣ ವಿಷಯದಲ್ಲಿ ಕೂಡ ತೊಂದರೆ ಆದರೆ ಅವರು ಸುಮ್ಮನೆ ಕುಳಿತುಕೊಳ್ಳುವವರು ಅಲ್ಲ. ಅವರು ಕೂಡ ತೀರಿಕೊಂಡಿದ್ದಾರೆ. ಅವರೆಲ್ಲಾ ಬಿಟ್ಟು ಹೋದಂಥ ಆದರ್ಶನಗಳನ್ನು ಮೆಲುಕು ಹಾಕುವುವುದರ ಜೊತೆಗೆ ಅವರ ಕುಟುಂಬ ವರ್ಗದವರಿಗೆ ಆತ್ಮಸ್ಥೈರ್ಯವನ್ನು ದೇವರು ಕರುಣಿಸಲಿ ಎಂದು ಪ್ರಾರ್ಥಿಸುತ್ತಾ. ತಾವು ಏನೂ ಸಂತಾಪ ಸೂಚನೆಯನ್ನು ತಂದಿದ್ದೀರಿ ಅದಕ್ಕೆ ನನ್ನ ಒಪ್ಪಿಗೆಯನ್ನು ಸೂಚಿಸಿ ನನಗೆ ಎರಡು ಮಾತುಗಳನ್ನಾಡಲಿಕ್ಕೆ ಅವಕಾಶ ಮಾಡಿಕೊಟ್ಟಂಥ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ಶ್ರೀ ಎಂ.ಜಿ. ಮುಳೆ (ಬಸವಕಲ್ಯಾಣ).- ಮಾನ್ಯ ಅಧ್ಯಕ್ಷರೆ, ಶ್ರೀ ಬಿ.ಡಿ. ಜತ್ತಿಯವರು, ಮಹಾತ್ಮ ಬಸವೇಶ್ವರರು ಮತ್ತು ಬಸವಕಲ್ಯಾಣ ಇವು ಮೂರಕ್ಕೆ ಬಹಳ ಅನ್ಯೋನ್ಯ ಸಂಬಂಧ ಇತ್ತು; ಹತ್ತಿರದ ಸಂಬಂಧ ಇತ್ತು. ಶ್ರೀ ಜತ್ತಿಯವರು ಒಂದು ಗ್ರಾಮದ ಸರಪಂಚ ಆಗಿ, ಜಮಖಂಡಿ ಪುರಸಭೆಯ ಅಧ್ಯಕ್ಷರಾಗಿ, ಜಮಖಂಡಿ ಸಂಸ್ಥಾನದ ಮುಖ್ಯಮಂತ್ರಿಯಾಗಿ, ಕರ್ನಾಟಕದ ಮುಖ್ಯಮಂತ್ರಿಯಾಗಿ ಉಪ-ರಾಷ್ಟ್ರಪತಿ, ರಾಷ್ಟ್ರಪತಿ ಆದಂಥ ಅವರು ಬಸವೇಶ್ವರರ ವಚನಗಳು, ಬಸವೇಶ್ವರರ ತತ್ವಜ್ಞಾನಗಳು, ಜೊತೆಯಲ್ಲಿ ಮಹಾತ್ಮ ಬಸವೇಶ್ವರರ ಕರ್ಮ ಭೂಮಿಯಾದಂಥ ಬಸವಕಲ್ಯಾಣ-ಇದನ್ನು ಅವರು ಮರೆತಿಲ್ಲ. ಅವರಿಗೆ ಬಸವಕಲ್ಯಾಣದ ಬಗ್ಗೆ ಬಹಳ ಆಕರ್ಷಣೆ ಇತ್ತು. ಅವರಿಗೆ ಬಸವಕಲ್ಯಾಣ, ಶರಣಭೂಮಿ ಬಹಳ ಹತ್ತಿರ ಇತ್ತು. ಶ್ರೀ ಜತ್ತಿಯವರು ಬಹಳ ಸರಳ ಜೀವಿಗಳು ಯಾವುದೇ ಪದವಿ ಗಳಿಸಿದರೂ ಅವರಲ್ಲಿ ಯಾವುದೇ ಬದಲಾವಣೆ ಆಗಲಿಲ್ಲ. ಅವರು ಗಾಂಧಿಟೋಪಿ ಧರಿಸುತ್ತಿದ್ದರು ಮತ್ತು ವಿಭೂತಿ ಹಚ್ಚುತ್ತಿದ್ದರು. ರಾಷ್ಟ್ರಪತಿ ಆದಂಥವರು, ವಿದೇಶಕ್ಕೆ ಹೋಗಿ ಬಂದಂಥವರು ಆಗಿದ್ದ ಇಂಥ ಶರಣ ಜೀವಿ ಬಸವಕಲ್ಯಾಣಕ್ಕೆ ಬಂದರೆ ಬಸವಕಲ್ಯಾಣಕ್ಕೆ ಪ್ರವೇಶ ಆಗುತ್ತಿದ್ದ ಹಾಗೆ ತನ್ನ ಕಾರಿನಿಂದ ಕೆಳಗೆ ಇಳಿದು ಬಸವಕಲ್ಯಾಣದ ಮಣ್ಣಿಗೆ ನಮಸ್ಕಾರ ಮಾಡುತ್ತಿದ್ದರು. ಶರಣ ಭೂಮಿ, ಮಹಾತ್ಮ ಬಸವೇಶ್ವರರ ಕರ್ಮ ಭೂಮಿ ಎಂದು ಬಹಳ ಶ್ರದ್ಧೆಯಿಂದ, ನಿಷ್ಠೆಯಿಂದ ಆ ಸ್ಥಾನಕ್ಕೆ ಗೌರವ ಕೊಡುತ್ತಿದ್ದರು. ಅವರ ಜೀವನದ ಕೊನೆಯಲ್ಲಿ ನಾಲ್ಕು ತಿಂಗಳ ಹಿಂದೆ ಬಸರಾಳಿ ಶರಣ ಕಮ್ಮಟದಲ್ಲಿ ಬಂದು ಅನುಭವ ಮಂಟಪ, ಮಹಾತ್ಮ ಬಸವೇಶ್ವರರ ದೇವಸ್ಥಾನ, ಇನ್ನಿತರ ಶರಣ ಸ್ಮಾರಕಗಳು ಅವುಗಳಿಗೆಲ್ಲಾ ಭೇಟಿ ಕೊಟ್ಟು ತನ್ನ ಕಣ್ಣಿನಲ್ಲಿ ನೋಡಿ ಒಂದೇ ಒಂದು ಆಸೆ ಪಡುತ್ತಿದ್ದರು. ಅದೇನೆಂದರೆ, ಈ ಎಲ್ಲಾ ಸ್ಥಾನಗಳ ಪುನರುಜ್ಜೀವನ ಆಗಬೇಕು, ಬಸವಕಲ್ಯಾಣ ಅಭಿವೃದ್ಧಿಯಾಗಬೇಕು, ಅನುಭವ ಮಂಟಪ ಇನ್ನೂ ದೊಡ್ಡದು ಆಗಬೇಕು ಎನ್ನುವ ಆಸೆ ಅವರಿಗೆ ಇತ್ತು. ನಾನು ಶಾಸಕ ಆಗಿ ಅವರ ಮನೆಗೆ ಅವರ ಆಶೀರ್ವಾದ ತೆಗೆದುಕೊಳ್ಳುವುದಕ್ಕೆ ಹೋದಾಗ ಶ್ರೀಮಾನ್ ಜತ್ತಿಯವರ ಆರೋಗ್ಯ ಸರಿಯಿಲ್ಲದಿದ್ದರೂ ಅವರೇ ಅವರ ಮಗ, ಸೊಸೆ ಜೊತೆಯಲ್ಲಿ ನನ್ನನ್ನು ಕೂರಿಸಿ, ಬಸವಕಲ್ಯಾಣ ಅಭಿವೃದ್ಧಿ ಮಾಡಿಸಿ ಎಂದು ಹೇಳುತ್ತಿದ್ದರು. ಇವತ್ತು ಶ್ರೀ ಜತ್ತಿಯವರು ಇಲ್ಲ. ಈ ನಾಡಿನ ಸೇವೆಯನ್ನು ಅವರು ಸಾಕಷ್ಟು ಮಾಡಿದ್ದಾರೆ. ಬಸವಾದಿ ಶರಣರಾಗಿ ಅವರು ಜೀವನ ಸಾಗಿಸಿದ್ದಾರೆ. ಅವರಿಗೆ ಅರ್ಪಿಸುವಂಥ ಶ್ರದ್ಧಾಂಜಲಿ

ಸಮಯೋಚಿತ ಶ್ರದ್ಧಾಂಜಲಿ ಆಗಬೇಕಾದರೆ, ಅವರಿಗೆ ನಿಯರ್ ಅಂಡ್ ಡಿಯರ್ ಆಗಿರುವಂಥ ಶರಣ ಸ್ಥಾವರಗಳು, ಬಸವಕಲ್ಯಾಣ, ಅನುಭವ-ಮಂಟಪ ಇವುಗಳ ಅಭಿವೃದ್ಧಿಯಾದರೆ ಅದೇ ಅವರಿಗೆ ಶ್ರದ್ಧಾಂಜಲಿ ಆಗಬಹುದೆಂದು ನಾನು ಭಾವಿಸುತ್ತೇನೆ. ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಯವರಲ್ಲಿ ನಾನು ವಿನಂತಿ ಮಾಡುವುದೇನೆಂದರೆ, ಬಸವಕಲ್ಯಾಣವನ್ನು ನಮ್ಮ ಕೂಡಲಸಂಗಮದ ಮಾದರಿಯಲ್ಲಿ ಅಭಿವೃದ್ಧಿ ಮಾಡಿ ಅವರಿಗೆ ಶ್ರದ್ಧಾಂಜಲಿಯನ್ನು ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಜೊತೆಗೆ ಶ್ರೀ ಸೂರ್ಯನಾರಾಯಣರಾವ್ ಮತ್ತು ಇತರೆಯವರಿಗೂ ಕೂಡ ಏನು ಸಂತಾಪ ಸೂಚನೆಯನ್ನು ಮಂಡಿಸಿದ್ದೀರಿ ಅದಕ್ಕೆ ನನ್ನ ಸಹಮತವನ್ನು ವ್ಯಕ್ತಪಡಿಸಿ ನನಗೆ ಇಷ್ಟು ಮಾತುಗಳನ್ನು ಹೇಳಲಿಕ್ಕೆ ಅವಕಾಶ ಮಾಡಿಕೊಟ್ಟಂಥ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು.- ಮೃತ ಗೌರವಾರ್ಥ ಮಾನ್ಯ ಸದಸ್ಯರೆಲ್ಲರೂ ಎದ್ದು ನಿಂತು ಒಂದು ನಿಮಿಷ ಕಾಲ ಮೌನವನ್ನಾಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

(ಮೃತ ಗೌರವಾರ್ಥ ಸದನದ ಎಲ್ಲಾ ಮಾನ್ಯ ಸದಸ್ಯರುಗಳು ಎದ್ದು ನಿಂತು ಒಂದು ನಿಮಿಷ ಮೌನವನ್ನಾಚರಿಸಿದರು).

ಅಧ್ಯಕ್ಷರು.- ಈ ಸದನವು ಅಂಗೀಕರಿಸಿದ ಸಂತಾಪ ಸೂಚಕ ನಿರ್ಣಯವನ್ನು ಮೃತರ ಕುಟುಂಬ ವರ್ಗದವರಿಗೆ ಕಳುಹಿಸಿಕೊಡಲಾಗುವುದು. ಈಗ ಸದನವನ್ನು ನಾಳೆ ಬೆಳಿಗ್ಗೆ 11-00 ಗಂಟೆವರೆಗೆ ಮುಂದೂಡುತ್ತಿದ್ದೇನೆ.

(ಸದನವು ಮಧ್ಯಾಹ್ನ 12 ಗಂಟೆ 37 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ ದಿನಾಂಕ 9ನೇ ಜುಲೈ 2002ರ ಮಂಗಳವಾರದಂದು ಬೆಳಿಗ್ಗೆ 11-00 ಗಂಟೆಗೆ ಸೇರಲು ನಿಶ್ಚಯಿಸಿತು).

(ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲವೆಂದು ಸೂಚಿಸುತ್ತದೆ).